
# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಭಾನುವಾರ, ಏಪ್ರಿಲ್ 25, 2021

ಸಂಪುಟ : 47 ಸಂಚಿಕೆ : 355 ☎ 254736 91642 99999 RNI No: 27369/75, KA/SK/CTA-275/2021-2023. O/P @ J.D. Circle P.O. ಪುಟ : 4 ರೂ : 4.00 www.janathavani.com janathavani@mac.com








1. ವಾರಾಂತ್ಯದ ಕರ್ಫ್ಯೂ ಹಿನ್ನೆಲೆಯಲ್ಲಿ ಶನಿವಾರ ಬೆಳಿಗ್ಗೆ ದಾವಣಗೆರೆ ಕೆ.ಆರ್. ಮಾರ್ಕೆಟ್‌ಗೆ ತಹಶೀಲ್ದಾರ್ ಗಿರೀಶ್ ಭೇಟಿ ನೀಡಿ 10 ಗಂಟೆಯೊಳಗೆ ವ್ಯಾಪಾರ ಸ್ಥಗಿತಗೊಳಿಸುವಂತೆ ಸೂಚಿಸಿದರು. 2. ಬೆಳಿಗ್ಗೆ 10ರ ನಂತರ ಮಾರುಕಟ್ಟೆಯ ಚಿತ್ರ. 3. ಕೆಎಸ್ಸಾರ್ಟಿಸಿ ಬಸ್‌ಗಳ ಮೂಲಕ ಜನತೆ ವಿವಿಧ ಊರುಗಳಿಗೆ ತೆರಳಿದರು.

## ವಾರವಿಡೀ ಕರ್ಫ್ಯೂ ಬಗ್ಗೆ ಸರ್ಕಾರದ ಚಿಂತನೆ

### ವಾರಾಂತ್ಯದ ಕರ್ಫ್ಯೂಗೆ ಜನ ಬೆಂಬಲ ದೊರೆತ ಬೆನ್ನಲ್ಲೇ ಕಠಿಣ ಕ್ರಮ ಸಾಧ್ಯತೆ

ಬೆಂಗಳೂರು, ಏ. 24 - ರೂಪಾಂತರಗೊಂಡಿರುವ ವೈರಸ್‌ನ ಕೊಂಡಿ ಕಳಚಲು ಸರ್ಕಾರ ಜಾರಿಗೆ ತಂದ ವಾರಾಂತ್ಯದ ಕರ್ಫ್ಯೂಗೆ ಜನ ಸಂಪೂರ್ಣ ಬೆಂಬಲ ವ್ಯಕ್ತಪಡಿಸಿದ್ದಾರೆ.

ಲಾಕ್‌ಡೌನ್ ಸಂದರ್ಭಕ್ಕಿಂತಲೂ ಹೆಚ್ಚಿನ ಬೆಂಬಲ ವಾರಾಂತ್ಯದ ಕರ್ಫ್ಯೂಗೆ ದೊರೆತಿದ್ದು, ಇದನ್ನು ಇಡೀ ವಾರಕ್ಕೆ ವಿಸ್ತರಿಸುವ ಬಗ್ಗೆ ಸರ್ಕಾರ ಚಿಂತನೆ ನಡೆಸಿದೆ.

ಸೋಮವಾರ ನಡೆಯುವ ಸಚಿವ ಸಂಪುಟ ಸಭೆಯಲ್ಲಿ ಕರ್ಫ್ಯೂ ವಿಸ್ತರಣೆ ಮತ್ತು ಮೇ 1 ರಿಂದ ನೀಡುವ ಲಸಿಕೆ ಉಚಿತವಾಗಿ ನೀಡಬೇಕೇ ಬೇಡವೇ? ಎಂಬ ಬಗ್ಗೆ ಮಹತ್ವದ ತೀರ್ಮಾನವನ್ನು ಕೈಗೊಳ್ಳಲಿದೆ.

ರಾಜ್ಯದಲ್ಲಿ ದಿನದಿಂದ ದಿನಕ್ಕೆ ಸೋಂಕು ವ್ಯಾಪಕವಾಗಿ ಹರಡುತ್ತಿರುವ ಹಿನ್ನೆಲೆಯಲ್ಲಿ ಜನತೆ ದಿಗ್ಭ್ರಾಂತರಾಗಿದ್ದಾರೆ. ನಗರ, ಪಟ್ಟಣ ಪ್ರದೇಶಗಳಲ್ಲಂತೂ ಕರ್ಫ್ಯೂ ಬೆಂಬಲಕ್ಕೆ ನಿಂತಿದ್ದಾರೆ.

ಅವಶ್ಯಕ ಸೇವೆಗಳಿಗೆ ತೆರಳುವವರು ಗುರುತಿನ ಚೀಟಿ ತೋರಿಸಿದರೆ, ಅಂತಹವರು ತಮ್ಮ ಪ್ರಯಾಣ ಮುಂದುವರೆಸಲು ಪೊಲೀಸರು ಅವಕಾಶ ಮಾಡಿಕೊಟ್ಟರು. ಇನ್ನು ಗ್ರಾಮೀಣ ಪ್ರದೇಶದಲ್ಲಿ ಕೃಷಿ ಚಟುವಟಿಕೆಗಳಿಗೆ ಕರ್ಫ್ಯೂ ಅಡ್ಡಿ ಬರಲಿಲ್ಲ.

ಸೋಂಕಿಗೂ ಬೆದರದೆ ಬೀದಿಗಿಳಿದ ಕೆಲವರ ಮೇಲೆ ಪೊಲೀಸರು ಬಿಸಿ ಮುಟ್ಟಿಸಿದ್ದಾರೆ. ನಿಯಮ ಮೀರಿ ವ್ಯಾಪಾರ ನಡೆಸುತ್ತಿರುವವರಿಗೂ ದಂಡ ಹಾಕಿದ್ದಾರೆ.

ಬೆಳಗಿನ ಅವಧಿಯಲ್ಲಿ ಜನ ಸ್ವಲ್ಪ ರಸ್ತೆಗಿಳಿದರಾದರೂ, ನಂತರ ಎಚ್ಚೆತ್ತುಕೊಂಡು ಮನೆ ಬಿಟ್ಟು ಬರಲಿಲ್ಲ. ಕೆಲವು ಭಂಡರು ಬೀದಿಗಿಳಿಯುವ ಪ್ರಯತ್ನ ಮಾಡಿದಾಗ ಪೊಲೀಸರು ಲಾಟಿ ರುಚಿ ತೋರಿಸಿದ್ದಾರೆ.

ಆರೋಗ್ಯ ಸೇವೆ ಹೊರತುಪಡಿಸಿ, ಉಳಿದೆಲ್ಲವೂ ಬಹುತೇಕ ಬಂದ್ ಆಗಿದ್ದವು. ರಾಜ್ಯಧಾನಿ ರಸ್ತೆಗಳು ಬಣ ಗುಡುತ್ತಿದ್ದವು. ರಾಜ್ಯ ರಸ್ತೆ ಸಾರಿಗೆಯ ಕೆಲವು ಬಸ್‌ಗಳು ರಸ್ತೆಗಿಳಿದಿದ್ದು, ಅವುಗಳಿಗೆ ಪ್ರಯಾಣಿಕರೇ ಇರಲಿಲ್ಲ.

ಇನ್ನು ಹೊರ ಊರುಗಳಿಗೆ ತೆರಳಲು ನಿನ್ನೆಯೇ ತಮ್ಮ ಸ್ಥಳವನ್ನು ಸೇರಿಕೊಂಡಿದ್ದರು. ಇಂದು ನಾಲ್ಕನೇ ಶನಿವಾರ ಮತ್ತು (2ನೇ ಪುಟಕ್ಕೆ)

## ಸಕ್ರಿಯ ಪ್ರಕರಣ: ಬೆಂಗಳೂರು ದೇಶದಲ್ಲೇ ಮೊದಲು

ಬೆಂಗಳೂರು, ಏ. 23 - ರಾಜ್ಯದ ರಾಜಧಾನಿ ಬೆಂಗಳೂರಿನಲ್ಲಿ 1.5 ಲಕ್ಷ ಸಕ್ರಿಯ ಕೊರೊನಾ ಸೋಂಕಿತರಿದ್ದು, ಇದು ದೇಶದ ಯಾವುದೇ ನಗರಕ್ಕಿಂತ ಅತಿ ಹೆಚ್ಚು ಎಂದಿರುವ ಕೊರೊನಾ ಕುರಿತ ತಾಂತ್ರಿಕ ಸಲಹಾ ಸಮಿತಿ, ರಾಜ್ಯ ಸರ್ಕಾರ 14 ದಿನಗಳ ಲಾಕ್‌ಡೌನ್ ಸೇರಿದಂತೆ, ಕಠಿಣ ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿದೆ.

**ಲಾಕ್‌ಡೌನ್ ಸೇರಿ ಕಠಿಣ ಕ್ರಮಕ್ಕೆ ಸಲಹಾ ಸಮಿತಿ ಶಿಫಾರಸ್ಸು**

ಸರ್ಕಾರ ಈ ಬಿಕ್ಕಟ್ಟು ಎದುರಿಸಲು ಆಸ್ಪತ್ರೆಗಳ ಬೆಡ್‌ಗಳ ಸಂಖ್ಯೆ ಹೆಚ್ಚಿಸಬೇಕು ಎಂದೂ ಸಹ ಸಮಿತಿಯ ಸದಸ್ಯರು ಶಿಫಾರಸ್ಸು ಮಾಡಿದ್ದಾರೆ.

ಬರುವ ಅಕ್ಟೋಬರ್ - ನವೆಂಬರ್‌ನಲ್ಲಿ ಕೊರೊನಾದ ಮೂರನೇ ಅಲೆ ಬರುವ ಸಾಧ್ಯತೆ ಇದೆ ಎಂದು ಹೇಳಿರುವ ಸಮಿತಿ, ಸರ್ಕಾರ ಆ ವೇಳೆಗೆ ಸೋಂಕು ಅಪಾಯ ಹೆಚ್ಚಾಗಿರುವ ವಯೋಮಾನದವರಿಗೆ ಲಸಿಕೆ ನೀಡಬೇಕು ಎಂದು ತಿಳಿಸಿದೆ.

ಸೋಂಕಿತರ ಸಂಖ್ಯೆ ಕಡಿಮೆ ಮಾಡಬೇಕಿದೆ. ಇದಕ್ಕಾಗಿ 14 ದಿನಗಳ ಕಾಲದ ಕಠಿಣ ಲಾಕ್‌ಡೌನ್ ಹೇರಬೇಕು ಎಂದು ಸಮಿತಿಯ ಸದಸ್ಯರಾಗಿರುವ ಸಾರ್ವಜನಿಕ ಆರೋಗ್ಯ ಪ್ರತಿಷ್ಠಾನ (ಪಿಹೆಚ್‌ಎಫ್‌ಐ) ನ ಲೈಫ್‌ಕೋರ್ಸ್ ಎಪಿಡೆಮಾಲಜಿ ಮುಖ್ಯಸ್ಥರಾದ ಗಿರಿಧರ ಬಾಬು ಹೇಳಿದ್ದಾರೆ.

ಎರಡನೆಯದಾಗಿ ಬೆಡ್‌ಗಳ ಸಂಖ್ಯೆ ಹೆಚ್ಚಿಸಬೇಕು. ಖಾಸಗಿ ಕಾಲೇಜು, ನರ್ಸಿಂಗ್ ಹೋಂ ಹಾಗೂ ಆಸ್ಪತ್ರೆಗಳು (2ನೇ ಪುಟಕ್ಕೆ)

# ವಾರಾಂತ್ಯದ ಕರ್ಫ್ಯೂಗೆ ಸ್ಪಂದಿಸಿದ ದಾವಣಗೆರೆ

### 10 ಗಂಟೆ ನಂತರ ನಗರ ಸಂಪೂರ್ಣ ಸ್ತಬ್ಧ, ಬಸ್ಸುಗಳ ಸಂಚಾರ

ದಾವಣಗೆರೆ, ಏ.24- ವಾರಾಂತ್ಯದ ಕರ್ಫ್ಯೂಗೆ ನಗರದಲ್ಲಿ ಉತ್ತಮ ಸ್ಪಂದನೆ ವ್ಯಕ್ತವಾಗಿದೆ. ಬೆಳಿಗ್ಗೆ 10 ಗಂಟೆಯ ನಂತರ ನಗರ ಸಂಪೂರ್ಣವಾಗಿ ಸ್ತಬ್ಧವಾಗಿತ್ತು.

ಅನಗತ್ಯವಾಗಿ ಓಡಾಡುವವರನ್ನು ನಿಯಂತ್ರಿಸಲು ಪೊಲೀಸರು ರಸ್ತೆಗಿಳಿದಿದ್ದರು. ಬೈಕ್, ಆಟೋ, ಕಾರು ಪ್ರತಿ ವಾಹನಗಳ ಚಾಲಕರನ್ನೂ ಪ್ರಶ್ನಿಸುತ್ತಿದ್ದ ಪೊಲೀಸರು, ಕಾರಣ ಇಲ್ಲದೆ ಓಡಾಡುತ್ತಿದ್ದವರಿಗೆ ದಂಡ ವಿಧಿಸಿ, ಎಚ್ಚರಿಕೆ ನೀಡುತ್ತಿದ್ದರು.

ಬೆಳಿಗ್ಗೆ 6 ರಿಂದ 10 ಗಂಟೆವರೆಗೆ ಅಗತ್ಯ ವಸ್ತುಗಳಾದ ತರಕಾರಿ, ಹಾಲು, ಹಣ್ಣು, ದಿನಸಿ ಮಾರಾಟಕ್ಕೆ ಅವಕಾಶವಿತ್ತು. ಜನತೆ ಅಗತ್ಯ ವಸ್ತುಗಳನ್ನು ಬೆಳಿಗ್ಗೆಯೇ ಖರೀದಿಸಿಟ್ಟುಕೊಂಡಿದ್ದರು.

**ಮಾರ್ಕೆಟ್ ಖಾಲಿ:** ಪ್ರತಿ ದಿನ ಬೆಳಿಗ್ಗೆ ಗಿಜಿಗಿಡುತ್ತಿದ್ದ ಮಾರುಕಟ್ಟೆ ಪ್ರದೇಶದಲ್ಲಿ ಇಂದು ಜನಸಂಖ್ಯೆ ಅತಿ ವಿರಳವಾಗಿತ್ತು. ಮೊದಲೇ ಕರ್ಫ್ಯೂ ಬಗ್ಗೆ ತಿಳಿದಿದ್ದ ರೈತಾಪಿ ವರ್ಗ ನಗರದತ್ತ ಸುಳಿಯಲಿಲ್ಲ. ಬೆರಳೆಣಿಕೆಯಷ್ಟೇ ಮಾರುಕಟ್ಟೆ ಮಳಿಗೆಗಳು ತೆರೆಯಲ್ಪಟ್ಟಿದ್ದವು.

ತಹಶೀಲ್ದಾರ್ ಗಿರೀಶ್ ತರಕಾರಿ ಮಾರುಕಟ್ಟೆಗೆ ಭೇಟಿ ನೀಡಿ ಬೀದಿ ಬದಿ ತರಕಾರಿ ಮಾರುತ್ತಿದ್ದವರಿಗೆ ಶೀಘ್ರವೇ ಜಾಗ ಖಾಲಿ ಮಾಡುವಂತೆ ಎಚ್ಚರಿಕೆ ನೀಡಿದರು. 10 ಗಂಟೆ ವೇಳೆಗೆ ಮಾರುಕಟ್ಟೆ ಸಂಪೂರ್ಣ ಖಾಲಿಯಾಗಿತ್ತು.


ತಹಶೀಲ್ದಾರ್ ಕಚೇರಿ ಬಳಿಯ ತರಕಾರಿ ಮಾರುಕಟ್ಟೆಯಲ್ಲೂ ಬೆಳಿಗ್ಗೆ ಜನರ ಸಂಖ್ಯೆ ವಿರಳ ವಾಗಿತ್ತು. ಬೀದಿ ಬದಿಯಲ್ಲಿ ತರಕಾರಿ ಮಾರಲು ಅವಕಾಶವಿರಲಿಲ್ಲ. ಕೈ ಗಾಡಿ, ಆಟೋಗಳಲ್ಲಿ ತರಕಾರಿ ಕೊಂಡೊಯ್ಯುತ್ತಿದ್ದರು. ಜನತೆ ಗುಂಪು ಸೇರಿದಂತೆ ಎಪಿಎಂಸಿ ಅಧಿಕಾರಿಗಳು ಮೈಕ್ ಮೂಲಕ ಎಚ್ಚರಿಕೆ ನೀಡುತ್ತಿದ್ದರು. ಆಟೋ ಮತ್ತಿತರೆ ವಾಹನಗಳು ಸ್ಥಳದಿಂದ ತೆರಳುವಂತೆ ಸೂಚಿಸುತ್ತಿದ್ದರು.

**ಸಂಚರಿಸಿದ ಖಾಲಿ ಬಸ್ಸುಗಳು:** ಬಸ್ ಸಂಚಾರಕ್ಕೆ ಅನುಮತಿ ನೀಡಲಾಗಿತ್ತು. ಪರಿಣಾಮ ವಿವಿಧ ಜಿಲ್ಲೆಗಳಿಂದ ಕೆಎಸ್ಸಾರ್ಟಿಸಿ ಬಸ್ಸುಗಳು ಬರುತ್ತಿದ್ದವು. ನಗರ ಸಾರಿಗೆ ಬಸ್ಸುಗಳೂ ಸಂಚರಿಸಿ ದವು. ಆದರೆ ಪ್ರಯಾಣಿಕರ ಸಂಖ್ಯೆ (2ನೇ ಪುಟಕ್ಕೆ)

### ಹೋಟೆಲ್‌ಗಳು ಬಂದ್ ಊಟಕ್ಕೆ ಪರದಾಟ

**ನಗರದಲ್ಲಿ ಹೋಟೆಲ್‌ಗಳು ತೆರೆಯದಿದ್ದರಿಂದ ತಿಂಡಿ, ಊಟಕ್ಕಾಗಿ ಪರದಾಡಬೇಕಾಯಿತು. ಪೊಲೀಸರು, ಕೆಎಸ್ಸಾರ್ಟಿಸಿ ಸಿಬ್ಬಂದಿಗಳು, ಕೆಲವು ಹಾಸ್ಟೆಲ್ ವಿದ್ಯಾರ್ಥಿಗಳು ಹಾಗೂ ಖಾಸಗಿಯಾಗಿ ರೂಂ ಪಡೆದು ವಾಸವಾಗಿದ್ದ ನೌಕರರು, ವಿದ್ಯಾರ್ಥಿಗಳು ಮಧ್ಯಾಹ್ನ ಹಾಗೂ ರಾತ್ರಿಯ ಊಟಕ್ಕಾಗಿ ಪರದಾಡಿದರು. ಜೊಮೊಟೋ ಹಾಗೂ ಸ್ವಿಗ್ಗಿ ಮೂಲಕ ಕೆಲವರು ಆಹಾರ ತರಿಸಿಕೊಳ್ಳುತ್ತಿದ್ದರು.**

## ಲಕ್ಷ ಡೋಸ್ ಕೋವಿಡ್ ಲಸಿಕೆ ಸರಬರಾಜಿಗೆ ಸಿದ್ದೇಶ್ವರ ಮನವಿ



ದಾವಣಗೆರೆ, ಏ.24-ಜಿಲ್ಲೆಗೆ ಶೀಘ್ರವಾಗಿ 1 ಲಕ್ಷ ಕೋವಿಶೀಲ್ಡ್ ಅಥವಾ ಕೋವ್ಯಾಕ್ಸಿನ್ ಲಸಿಕೆಗಳನ್ನು ಪೂರೈಕೆ ಮಾಡಲು ಸಂಬಂಧಿಸಿದವರಿಗೆ ಸೂಕ್ತ ನಿರ್ದೇಶನ ನೀಡುವಂತೆ ಸಂಸದ ಜಿ.ಎಂ. ಸಿದ್ದೇಶ್ವರ ಅವರು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಆರೋಗ್ಯ ಸಚಿವ ಡಾ.ಡಿ ಸುಧಾಕರ್, ಸರ್ಕಾರದ ಮುಖ್ಯ ಕಾರ್ಯದರ್ಶಿ ಹಾಗೂ ಆರೋಗ್ಯ ಇಲಾಖೆ ಪ್ರಧಾನ (2ನೇ ಪುಟಕ್ಕೆ)


**ಜಮೀನು ಮಾರಾಟಕ್ಕಿದೆ**

ಹಿರೇಮೇಗಳಗೆರೆ ಸಮೀಪದಲ್ಲಿ 5 ಎಕರೆ, 53 ಸೆಂಟ್ಸ್ ಮತ್ತು 6 ಎಕರೆ, 55 ಸೆಂಟ್ಸ್ ಕಾರ್ನರ್ ಒಟ್ಟು ವಿಸ್ತೀರ್ಣ 12 ಎಕರೆ, 08 ಸೆಂಟ್ಸ್ ಕೆಂಪು ಮಣ್ಣಿನ ಜಮೀನು ಮಾರಾಟಕ್ಕಿದೆ. 3 ಬೋರ್‌ಗಳಿವೆ. ಕಾಡಜ್ಜಿ ಕೃಷಿ ವಿಜ್ಞಾನ ಕೇಂದ್ರದಿಂದ 3 ಕಿಲೋಮಿಟರ್‌ದಲ್ಲಿದೆ. ದಾವಣಗೆರೆಯಿಂದ 10 ಕಿ.ಮೀ.ನಲ್ಲಿದೆ.

ಬೂಸ್ನೂರು ಕಿರಣ್ (ಏಜೆಂಟ್)
98440 63409, 97315 63409



**ರಂಜಾನ್ ರೋಜಾ ಸಮಯ**

ದಿನಾಂಕ : 25.04.2021
ಇಫ್ತೇಯಾರಿ ಸಮಯ : 6-48

ದಿನಾಂಕ 26.04.2021
ಸಹೇರಿ ಸಮಯ : 4-53

## ಜಿಲ್ಲೆಯಲ್ಲಿ 254 ಪಾಸಿಟಿವ್, 2 ಸಾವು

### ಮತ್ತೆ ಸಾವಿನ ಖಾತೆ ತೆರೆದ ಕೊರೊನಾ



ದಾವಣಗೆರೆ, ಏ.24- ಜಿಲ್ಲೆಯಲ್ಲಿ ಶನಿವಾರ 254 ಜನರಲ್ಲಿ ಕೊರೊನಾ ಸೋಂಕು ದೃಢಪಟ್ಟಿದ್ದು, ಇಬ್ಬರು ಸಾವನ್ನಪ್ಪಿರುವ ಬಗ್ಗೆ ವರದಿಯಾಗಿದೆ.

ಬಾಪೂಜಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ನಗರದ ದೇವರಾಜ ಅರಸು ಬಡಾವಣೆಯ 50 ವರ್ಷದ ಪುರುಷ ಹಾಗೂ ಸಿ.ಜೆ. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ 56 ವರ್ಷದ ಪುರುಷ ಕೋವಿಡ್ ಸೋಂಕಿನಿಂದ ಸಾವನ್ನಪ್ಪಿದ್ದಾರೆ.

ದಾವಣಗೆರೆ ತಾಲ್ಲೂಕಿನಲ್ಲಿ 185, ಹರಿಹರ 27, ಜಗಳೂರು 10, ಚನ್ನಗಿರಿ 19, ಹೊನ್ನಾಳಿ 9 ಹಾಗೂ ಹೊರ ಜಿಲ್ಲೆಯ ನಾಲ್ವರಲ್ಲಿ ಸೋಂಕು ಕಾಣಿಸಿಕೊಂಡಿದ್ದು, 121 ಜನರು ಗುಣವಾಗಿದ್ದಾರೆ.

ಒಟ್ಟಾರೆ ಜಿಲ್ಲೆಯಲ್ಲಿ ಸಕ್ರಿಯ ಪ್ರಕರಣಗ ಸಂಖ್ಯೆ 1397ಕ್ಕೆ ಏರಿಕೆಯಾಗಿದ್ದು, ಇಲ್ಲಿಯವರೆಗೆ ಮೃತಪಟ್ಟವರ ಸಂಖ್ಯೆ 266.

**ಮತ್ತೆ ಖಾತೆ ತೆರೆದ ಸಾವಿನ ಸಂಖ್ಯೆ:** ಕಳೆದ ಡಿಸೆಂಬರ್ ತಿಂಗಳಲ್ಲಿ ಕೊರೊನಾದಿಂದ ಒಂದು ಸಾವು ಸಂಭವಿಸಿದ್ದು ಬಿಟ್ಟರೆ ನಿನ್ನೆ ವರೆಗೆ ಯಾವುದೇ ಸಾವು ಸಂಭವಿಸಿರಲಿಲ್ಲ.

ಆದರೆ ಇದೀಗ ಎರಡನೇ ಅಲೆಯಲ್ಲಿ 2 ಸಾವುಗಳು ಸಂಭವಿಸಿದೆ. ಈ ಮೂಲಕ ಸಾವಿನ ಖಾತೆ ಪುನರಾರಂಭವಾದಂತಾಗಿದೆ. ಇಲ್ಲಿಯವರೆಗೆ 24613 ಜನರಿಗೆ ಸೋಂಕು ಕಾಣಿಸಿದ್ದರೆ, 22950 ಜನರು ಗುಣಮುಖರಾಗಿದ್ದಾರೆ.

## ಮಾರ್ಗಸೂಚಿ ಅನ್ವಯ ದುಡಿಮೆಗೆ ಅವಕಾಶ ನೀಡಿ : ಎಸ್ಸೆಸ್-ಎಸ್ಸೆಸ್ಸೆಂ





ದಾವಣಗೆರೆ, ಏ. 24- ಕೊರೊನಾದ 2ನೇ ಅಲೆ ತೀವ್ರವಾಗಿದ್ದು, ನಾಗರಿಕರು ಜೀವನಕ್ಕಿಂತ ಜೀವ ದೊಡ್ಡದು ಎಂಬುದನ್ನು ಅರಿತು ಮನೆಯಲ್ಲೇ ಇದ್ದು, ಕೋವಿಡ್ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕೆಂದು ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಶಾಸಕ ಡಾ. ಶಾಮನೂರು ಶಿವಶಂಕರಪ್ಪ ಹಾಗೂ ಮಾಜಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಮನವಿ ಮಾಡಿದ್ದಾರೆ.

ಜಿಲ್ಲಾಡಳಿತ ಕಠಿಣ ಕ್ರಮದ ಹೆಸರಿನಲ್ಲಿ ಗುಬ್ಬಿ ಮೇಲೆ ಬ್ರಹ್ಮಾಸ್ತ್ರ ಬಿಡುವಂತೆ ನಡೆದುಕೊಳ್ಳದೇ ಮಾರ್ಗಸೂಚಿ ಅನ್ವಯ ದುಡಿಮೆಗೆ ಅವಕಾಶ ನೀಡಬೇಕು. ಜಿಲ್ಲೆಯ ಬಹುತೇಕ ಕಡೆಗಳಲ್ಲಿ ಅಗತ್ಯ ವಸ್ತುಗಳನ್ನು ಹೊರತುಪಡಿಸಿ ಎಲ್ಲಾ ಅಂಗಡಿ-ಮುಂಗಟ್ಟುಗಳನ್ನು ಬಂದ್ ಮಾಡಿಸಿದ್ದು, ಈ ಅಂಗಡಿ-ಮುಂಗಟ್ಟುಗಳಲ್ಲಿ ಕೆಲಸ ಮಾಡುವವರಿಗೆ ಜಿಲ್ಲಾಡಳಿತ ನೆರವು ನೀಡಬೇಕೆಂದು ಆಗ್ರಹಿಸಿದ್ದಾರೆ.

### ಕೋವಿಡ್ ನಿಯಮಗಳನ್ನು ಪಾಲಿಸಲು ಜನತೆಗೆ ಮನವಿ

ಕೊರೊನಾ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಬೇಕಾದ ಸರ್ಕಾರ, ಜನರನ್ನು ತಪ್ಪಿತಸ್ಥರು ಎಂದು ಬಿಂಬಿಸದೇ ತಮ್ಮ ತಪ್ಪುಗಳನ್ನು ಒಪ್ಪಿಕೊಂಡು ಕೊರೊನಾದಿಂದ ಜೀವನಕ್ಕೆ ತೊಂದರೆ (2ನೇ ಪುಟಕ್ಕೆ)


**MANIS DATA LINK**

BSNL

# 446/1, Lawyer Road, K.B.Extension, Davanagere.

ನಿಮ್ಮಲ್ಲಿರುವ ಹಳೇ ಲ್ಯಾಂಡ್ ಲೈನ್ ನಂಬರ್‌ಗೆ ಇಂಟರ್‌ನೆಟ್ (FTTH) ಸೌಲಭ್ಯ ಕಲ್ಪಿಸಲಾಗುವುದು

**3300 GB**
**60 Mbps**

Super Speed Inter Net
24 Hrs. Unlimited free Calling on (Local + STD) to Any Network, **FTTH Plan**

**Starting Plan**
**Rs.599/-**
*Instalation Free*

**PH: 08192 295900**


## ಡೆತ್ ಆಡಿಟ್ ಸಮಿತಿ ಮರು ರಚನೆಗೆ ಡಿಸಿ ಸೂಚನೆ

ದಾವಣಗೆರೆ, ಏ.24- ಜಿಲ್ಲೆಯಲ್ಲಿ ಸಂಭವಿಸುವ ಕೋವಿಡ್ ಅಥವಾ ನಾನ್ ಕೋವಿಡ್ ಸಾವುಗಳ ಕುರಿತು ವಿಶ್ಲೇಷಣೆ ನಡೆಸಲು ಈ ಹಿಂದೆ ರಚಿಸಲಾಗಿದ್ದ ಡೆತ್ ಆಡಿಟ್ ಸಮಿತಿಯನ್ನು ತಕ್ಷಣವೇ ಮರು ರಚಿಸಿ, ಇಂದಿನಿಂದಲೇ ಸಂಭವಿಸುವ ಯಾವುದೇ ಸಾವಿನ ವರದಿಯನ್ನು ನೀಡಬೇಕೆಂದು ಡಿಹೆಚ್‌ಓ ಮತ್ತು ಜಿಲ್ಲಾ ಶಸ್ತ್ರಚಿಕಿತ್ಸಕರಿಗೆ ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ ಸೂಚಿಸಿದರು.

ಜಿಲ್ಲಾಡಳಿತ ಕಚೇರಿಯಲ್ಲಿ ಶನಿವಾರ ವೈದ್ಯಾಧಿಕಾರಿಗಳು, ವೈದ್ಯರು ಮತ್ತು ಎರಡು ಮೆಡಿಕಲ್ ಕಾಲೇಜುಗಳ ಮುಖ್ಯಸ್ಥರು ಸೇರಿದಂತೆ ವಿವಿಧ ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ಜಿಲ್ಲಾಧಿಕಾರಿಗಳು ತುರ್ತು ಸಭೆ ನಡೆಸಿದರು.

ಕೋವಿಡ್ ಸೋಂಕು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಡಿಸಿ ಆದಿಯಾಗಿ ಎಲ್ಲರೂ ಒಂದು ತಂಡದಲ್ಲಿ ಶ್ರದ್ದೆಯಿಂದ ಕಾರ್ಯ ನಿರ್ವಹಿಸಬೇಕು ಎಂದ ಅವರು, ವಿವಿಧ ನೋಡಲ್ ಅಧಿಕಾರಿಗಳನ್ನು ನೇಮಕ ಮಾಡಿದರು.

**ತಜ್ಞರ ಸಮಿತಿ ಸಭೆ:** ವೈದ್ಯಕೀಯ ತಜ್ಞರ ಸಮಿತಿಯ ಸದಸ್ಯರು ಪ್ರತಿ ಎರಡು ದಿನಗಳಿಗೆ ಒಮ್ಮೆ ಸಭೆಯನ್ನು ನಡೆಸಿ, ಆಸ್ಪತ್ರೆಯ ಸಕ್ರಿಯ ಪ್ರಕರಣಗಳು, ಆಕ್ಸಿಜನ್ ಬೆಡ್‌ಗಳಲ್ಲಿ ಎಷ್ಟು ಜನ ರೋಗಿಗಳು ಯಾವ ಸ್ಥಿತಿಯಲ್ಲಿದ್ದಾರೆ, ಯಾರಿಗೆ ಏನು ಅವಶ್ಯಕತೆ ಇದೆ ಹಾಗೂ ಮುಂದಿನ ಹತ್ತು ದಿನಗಳ ಪರಿಸ್ಥಿತಿ ಬಗ್ಗೆ ಪರಿಶೀಲನೆ ನಡೆಸಿ ವರದಿ ಸಿದ್ದಪಡಿಸಿ ಕ್ರಮ ವಹಿಸಬೇಕೆಂದು ಸೂಚನೆ ನೀಡಿದರು.

**ಫ್ಲೈಯಿಂಗ್ ಸ್ಕ್ವಾಡ್ ರಚನೆ :** ಜಿಲ್ಲಾಸ್ಪತ್ರೆ ಉಗ್ರಾಣ ಹಾಗೂ ಇತರೆ ಕೋವಿಡ್ ನಿರ್ವಹಿಸುತ್ತಿರುವ ಆಸ್ಪತ್ರೆಗಳ ಫಾರ್ಮಸಿಗಳಲ್ಲಿ ಔಷಧಗಳ ಲಭ್ಯತೆ ಹಾಗೂ ಔಷಧಗಳ ಬಳಕೆ, ಹೆಚ್ಚಿನ ಬಳಕೆ ಮತ್ತು ದುರ್ಬಳಕೆ ಕುರಿತು ಉಸ್ತುವಾರಿ ನೋಡಿಕೊಳ್ಳಲು ಫ್ಲೈಯಿಂಗ್ ಸ್ಕ್ವಾಡ್ ರಚಿಸಲಾಗುವುದು. ಈ ಫ್ಲೈಯಿಂಗ್ ಸ್ಕ್ವಾಡ್ ಪೊಲೀಸರ ಸಹಾಯ ಪಡೆದುಕೊಂಡು ಉಗ್ರಾಣ, ಫಾರ್ಮಸಿಗಳಿಗೆ ಭೇಟಿ ನೀಡಿ ಕೋವಿಡ್‌ಗೆ ಸಂಬಂಧಿಸಿದ ಯಾವುದೇ ಔಷಧಿ, ಲಸಿಕೆ ಕುರಿತು ಪರಿಶೀಲಿಸಿ ಔಷಧ ಲಭ್ಯತೆ ಮತ್ತು ಬಳಕೆ ಬಗ್ಗೆ ವಿವರವಾದ ವರದಿ ನೀಡಬೇಕೆಂದರು.

ಕೆಪಿಎಂಇ ಅಡಿಯಲ್ಲಿ ಕಳೆದ ಬಾರಿ ರಚಿಸಲಾಗಿದ್ದ ತಂಡಗಳನ್ನು ಪುನರ್ ರಚಿಸಲಾಗುವುದು. ಈ ತಂಡಗಳು ಮೆಡಿಕಲ್ ಶಾಪ್‌ಗಳ ವರದಿ ಮತ್ತು ವಿವಿಧ (2ನೇ ಪುಟಕ್ಕೆ)

### ಮೋತಿವೀರಪ್ಪ ಕಾಲೇಜಿನಲ್ಲಿ ಲಸಿಕೆ


**ಜಿಲ್ಲೆಯಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಕೋವಿಡ್ ಲಸಿಕೆಯನ್ನು ಸಿಜಿ ಆಸ್ಪತ್ರೆ ಬದಲಾಗಿ ನಗರದ ಮೋತಿ ವೀರಪ್ಪ ಕಾಲೇಜಿನಲ್ಲಿ ನೀಡಲು ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾಧಿಕಾರಿ ಹೇಳಿದ್ದಾರೆ. ಮೇ 1 ರ ನಂತರ 18 ವರ್ಷ ಮೇಲ್ಪಟ್ಟವರಿಗೆ ಲಸಿಕೆ ನೀಡಲು ಇನ್ನೂ ಮಾರ್ಗಸೂಚಿಗಳು ಬಂದಿಲ್ಲ. ಆದರೂ ಈ ಲಸಿಕೆ ನೀಡಲು ಯುದ್ದದ ರೀತಿಯಲ್ಲಿ ಸನ್ನದ್ದರಾಗಬೇಕಿದ್ದು, ಮೈಕ್ರೋ ಪ್ಲಾನ್ ಸಿದ್ದಪಡಿಸಲಾಗುವುದು ಎಂದು ಹೇಳಿದರು.**

### ದಾವಣಗೆರೆಯತ್ತ ಬೆಂಗಳೂರಿನ ಕೋವಿಡ್ ರೋಗಿಗಳು

**ಬೆಂಗಳೂರಿನಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚಾಗಿ ಬೆಡ್ ಸಿಗದೇ ಇರುವ ಕಾರಣಕ್ಕೆ ದಾವಣಗೆರೆಗೆ ಕೆಲವರು ಬಂದು ಖಾಸಗಿ ಮತ್ತು ಜಿಲ್ಲಾಸ್ಪತ್ರೆಯಲ್ಲಿ ದಾಖಲಾಗಿರುವ ವಿಷಯ ಗಮನಕ್ಕೆ ಬಂದಿದ್ದು, ಇನ್ನು ಮುಂದೆ ವೈದ್ಯಾಧಿಕಾರಿಗಳು ನನ್ನ ಗಮನಕ್ಕೆ ತಂದು ದಾಖಲು ಮಾಡಿಕೊಳ್ಳಬೇಕು. ಮೊದಲು ಜಿಲ್ಲೆಯ ಅವಶ್ಯಕತೆಗಳನ್ನು ಪರಿಗಣಿಸಿ ನಂತರ ದಾಖಲಾತಿ ಮಾಡಲು ಕ್ರಮ ವಹಿಸಲಾಗುವುದು ಎಂದರು.**


**ತೃತೀಯ ವರ್ಷದ ಪುಣ್ಯಸ್ಮರಣೆ**

**ಕಬ್ಬೂರು ಗಂಗಜ್ಜರ ಕೆ.ಜಿ. ವೀರಭದ್ರಪ್ಪನವರು**



ನೀವು ನಮ್ಮನ್ನಗಲಿ ಇಂದಿಗೆ ಮೂರು ವರ್ಷಗಳಾದವು. ನೀವು ಹಾಕಿಕೊಟ್ಟ ಮಾರ್ಗದಲ್ಲೇ ಮುನ್ನಡೆಯುತ್ತಾ ಸದಾ ನಿಮ್ಮ ಸ್ಮರಣೆಯಲ್ಲಿರುವ...

ದಿ|| ಕೆ.ಜಿ. ಹನುಮಂತಪ್ಪನವರ ಮಕ್ಕಳು.
ದಿ|| ಕೆ.ಜಿ. ವೀರಭದ್ರಪ್ಪನವರ ಮಕ್ಕಳು,
ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು
ಹಾಗೂ ಕುಟುಂಬಸ್ಥರು ಮತ್ತು ಬಂಧು-ಮಿತ್ರರು.

**ಕೆ.ಜಿ. ಪ್ರಕಾಶ್ ಅಂಡ್ ಸನ್ಸ್**
ಎ.ಪಿ.ಎಂ.ಸಿ. ಯಾರ್ಡ್, 'ಬಿ' ಬ್ಲಾಕ್, ದಾವಣಗೆರೆ. ಮೊ.: 94484 23011

## ಕೋವಿಡ್ ಮಾರ್ಗಸೂಚಿ ಕಡ್ಡಾಯವಾಗಿ ಪಾಲಿಸಿ



ಹೊನ್ನಾಳಿ, ಏ.24- ರಾಜ್ಯಾದ್ಯಂತ ಕೋವಿಡ್ ಎರಡನೇ ಅಲೆ ದಿನೇ ದಿನೇ ಹೆಚ್ಚಾಗುತ್ತಿದ್ದು, ಜನರು ಕೇಂದ್ರ ಹಾಗೂ ರಾಜ್ಯ ಸರ್ಕಾರದ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸುವಂತೆ ಸಿಎಂ ರಾಜಕೀಯ ಕಾರ್ಯದರ್ಶಿ ಎಂ.ಪಿ.ರೇಣುಕಾಚಾರ್ಯ ಹೊನ್ನಾಳಿ-ನ್ಯಾಮತಿ ಅವಳಿ ತಾಲ್ಲೂಕಿನ ಜನರಲ್ಲಿ ಮನವಿ ಮಾಡಿದ್ದರೆ.

ಪತ್ರಿಕಾ ಪ್ರಕಟಣೆ ಮೂಲಕ ಮನವಿ ಮಾಡಿರುವ ರೇಣುಕಾಚಾರ್ಯ, ತಮಗೆ ಕೋವಿಡ್ ಸೋಂಕು ತಗುಲಿದೆ ಹಿನ್ನೆಲೆಯಲ್ಲಿ ವೈದ್ಯರ ಸಲಹೆ ಮೇರೆಗೆ ಬೆಂಗಳೂರಿನ ಸರ್ಕಾರಿ ನಿವಾಸದಲ್ಲಿ ಹೋಮ್ ಐಸೋಲೇಷನ್‌ನಲ್ಲಿ ವಿಶ್ರಾಂತಿ ಪಡೆಯುತ್ತಿದ್ದು ನನ್ನ ಆರೋಗ್ಯ ಸ್ಥಿರವಾಗಿದೆ ಎಂದರು.

## ವೀರಭದ್ರೇಶ್ವರ ಸ್ವಾಮಿ ರಥೋತ್ಸವ ರದ್ದು

ದಾವಣಗೆರೆ, ಏ.24- ಕೊರೊನಾ ಹಿನ್ನೆಲೆಯಲ್ಲಿ ನಾಳೆ ದಿನಾಂಕ 25 ರಿಂದ ಇದೇ ದಿನಾಂಕ 28 ರವರೆಗೆ ನಡೆಯಬೇಕಿದ್ದ ನಗರದ ಹಳೇಪೇಟೆ ಶ್ರೀ ವೀರಭದ್ರೇಶ್ವರ ಸ್ವಾಮಿಯ ರಥೋತ್ಸವವನ್ನು ರದ್ದುಪಡಿಸಲಾಗಿದೆ ಎಂದು ದೇವಸ್ಥಾನ ಸಮಿತಿಯ ಕಾರ್ಯದರ್ಶಿ ಕುದುರಿ ವಿಶ್ವನಾಥ್ ತಿಳಿಸಿದ್ದಾರೆ.

# ಡೆತ್ ಆಡಿಟ್ ಸಮಿತಿ ಮರು ರಚನೆಗೆ ಸೂಚನೆ

**(1ನೇ ಪುಟದಿಂದ)** ಆಸ್ಪತ್ರೆಗಳಿಗೆ ಭೇಟಿ ನೀಡಿ ಅನಧಿಕೃತವಾಗಿ ರೆಮಿಡಿಸಿವಿರ್ ಸೇರಿದಂತೆ ಇತರೆ ಲಸಿಕೆ ಮಾರಾಟ ಮಾಡುತ್ತಿದ್ದರೆ ಅಂತಹ ಆಸ್ಪತ್ರೆಗಳನ್ನು ಮುಚ್ಚಿಸಲು ಕ್ರಮ ಕೈಗೊಳ್ಳಲಾಗುವುದು ಎಂದರು.

**ಆರ್‌ಟಿಪಿಸಿಆರ್ ಲ್ಯಾಬ್ ನಿರ್ವಹಣೆಗೆ ನೋಡಲ್ ಅಧಿಕಾರಿ :** ಪ್ರತಿ ದಿನ ಎಷ್ಟು ಪರೀಕ್ಷೆಗಳು ನಡೆಯುತ್ತಿವೆ ಹಾಗೂ ಸಂಪೂರ್ಣ ಲ್ಯಾಬ್‌ನ ಕಾರ್ಯವೈಖರಿಯನ್ನು ವಿಶ್ಲೇಷಿಸಿ ಕ್ರಮ ವಹಿಸಲು ಡಾ.ಗಂಗಾಧರ್ ಇವರನ್ನು ನೋಡಲ್ ಅಧಿಕಾರಿಯನ್ನಾಗಿ ನೇಮಿಸಲಾಗುವುದು ಎಂದರು.

ಪ್ರಸ್ತುತ ಪ್ರೈಮರಿ ಮತ್ತು ಸೆಕೆಂಡರಿ ಸಂಪರ್ಕದ ಪರೀಕ್ಷೆಗಳು ಸಾಕಷ್ಟು ಆಗುತ್ತಿದ್ದರೂ ಡಾಟಾ ಎಂಟ್ರಿಯಲ್ಲಿ ಅದು ಸರಿಯಾಗಿ ಅಪ್‌ಡೇಟ್ ಮಾಡದೇ ಇರುವ ಕಾರಣ ರಾಜ್ಯ ವರದಿಯಲ್ಲಿ ಕಡಿಮೆ ತೋರಿಸುತ್ತಿದೆ. ಆದ ಕಾರಣ ಟಿಹೆಚ್‌ಓ ಸೇರಿದಂತೆ ಸಂಬಂಧಿಸಿದ ಅಧಿಕಾರಿಗಳು ಡಾಟಾ ಎಂಟ್ರಿ ಸಮರ್ಪಕವಾಗಿ ಮಾಡಿಸಲು ಕ್ರಮ ಕೈಗೊಳ್ಳಬೇಕು. ಸಿಜಿ ಆಸ್ಪತ್ರೆಯಲ್ಲಿ ಪ್ರಸ್ತುತ 2000 ಪೂಲಿಂಗ್ ಪರೀಕ್ಷೆ ಮಾಡಿಸುವ ಸಾಮರ್ಥ್ಯ ಇದೆ. ಸಕ್ರಿಯ ಪ್ರಕರಣದ 10 ಪಟ್ಟು ಟೆಸ್ಟ್ ಆಗಬೇಕಿದ್ದು, ಈ ಬಗ್ಗೆ ಕ್ರಮ ವಹಿಸಲಾಗುತ್ತಿದೆ. ಹಾಗೂ ಆಸ್ಪತ್ರೆಗೆ ಅಗತ್ಯವಿರುವ ಎಲ್ಲ ಅಗತ್ಯ ಔಷಧಿಗಳು ಮತ್ತು ಸುರಕ್ಷತಾ ಪರಿಕರಗಳ ಖರೀದಿಗೆ ಕ್ರಮ ವಹಿಸಲಾಗಿದೆ ಎಂದರು.

ಇಂದು ಕೋವಿಡ್ ಲಸಿಕೆಯ ಗುರಿ 13,000 ಸಾವಿರ ಇದ್ದು 7,000 ಲಸಿಕೆ ಸರಬರಾಜಾಗಿದ್ದು ಲಸಿಕೆ ನೀಡಲು ಕ್ರಮ ಕೈಗೊಳ್ಳಲಾಗಿದೆ. ನಗರ ಹಾಗೂ ಎಲ್ಲ ತಾಲ್ಲೂಕುಗಳಲ್ಲಿ ಕೋವಿಡ್ ಕೇರ್ ಸೆಂಟರ್ ತೆರೆಯಲು ವ್ಯವಸ್ಥೆ ಮಾಡಲಾಗಿದೆ. ಜೊತೆಗೆ 3 ಆಂಬ್ಯುಲೆನ್ಸ್ ಖರೀದಿ ಹಾಗೂ ಶವ ಸಾಗಣೆ ವಾಹನ ಸಿದ್ದಪಡಿಸಿಕೊಳ್ಳಲು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು.

**ಸ್ವಯಂಪ್ರೇರಿತ ವೈದ್ಯರಿಗೆ ಸ್ವಾಗತ :** ಕೋವಿಡ್ ಹೆಚ್ಚುತ್ತಿರುವ ಈ ಸಂದರ್ಭದಲ್ಲಿ ಕೋವಿಡ್‌ಗೆ ಸ್ವಯಂಪ್ರೇರಿತವಾಗಿ ಸೇವೆ ಸಲ್ಲಿಸಲು ಇಚ್ಚಿಸುವ ವೈದ್ಯರನ್ನು ಜಿಲ್ಲಾಡಳಿತ ಸ್ವಾಗತಿಸುತ್ತದೆ ಎಂದು ತಿಳಿಸಿದರು.

ಸಿಜಿ ಆಸ್ಪತ್ರೆಯಲ್ಲಿ ಕೋವಿಡ್ ರೋಗಿಗಳಿಗೆ ಚಿಕಿತ್ಸೆ ನೀಡಲು ಎಂಐಸಿಯು ಸ್ಥಾಪಿಸಿ ಕಾರ್ಯ ನಿರ್ವಹಿಸುತ್ತಿದ್ದು, ರೂಂ ನಂ.65 ಮತ್ತು 66 ರಲ್ಲಿ ಸ್ಟೆಪ್ ಡೌನ್ ಎಂಐಸಿಯು ಸ್ಥಾಪಿಸಲು ಎಲ್ಲ ರೀತಿಯ ಕ್ರಮ ವಹಿಸಲಾಗುತ್ತಿದೆ. ಅಗತ್ಯ ಸಿಬ್ಬಂದಿ ನೇಮಕ ಅಥವಾ ನಿಯೋಜನೆಗೆ ಕ್ರಮ ಕೈಗೊಳ್ಳಲಾಗುತ್ತಿದೆ ಎಂದರು.

ಬಾಪೂಜಿ ಮತ್ತು ಎಸ್‌ಎಸ್ ಮೆಡಿಕಲ್ ಕಾಲೇಜುಗಳಿಂದ ತಲಾ ಒಬ್ಬರು ಮೈಕ್ರೋಬಯಾಲಜಿಸ್ಟ್‌ಗಳನ್ನು ತಾತ್ಕಾಲಿಕವಾಗಿ 2 ಅಥವಾ 3 ತಿಂಗಳ ಕಾಲ ಸಿಜಿ ಆಸ್ಪತ್ರೆಗೆ ನಿಯೋಜಿಸುವಂತೆ ಕಾಲೇಜುಗಳ ಮುಖ್ಯಸ್ಥರುಗಳಿಗೆ ಡಿಸಿ ಮನವಿ ಮಾಡಿದರು.

ಎಸ್‌ಎಸ್ ಆಸ್ಪತ್ರೆಯ ಡಾ.ಕಾಳಪ್ಪನವರ್ ಮಾತನಾಡಿ, ರೋಗಿಗಳಿಗೆ ಲಿಕ್ವಿಡ್ ಆಕ್ಸಿಜನ್ ಉತ್ತಮವಾಗಿದ್ದು, ಇದರ ಲಭ್ಯತೆ ಹೆಚ್ಚಿಸಬೇಕೆಂದರು. ಬಾಪೂಜಿ ಆಸ್ಪತ್ರೆಯ ಡಾ.ರವಿ ಮಾತನಾಡಿ, ಲಿಕ್ವಿಡ್ ಆಕ್ಸಿಜನ್ ಸರಬರಾಜಿನಲ್ಲಿ ಯಾವುದೇ ವ್ಯತ್ಯಯವಾಗದಂತೆ ಮುಂಜಾಗ್ರತಾ ಕ್ರಮ ವಹಿಸುವುದು ಸೂಕ್ತ ಎಂದರು.

ಸಭೆಯಲ್ಲಿ ಎಡಿಸಿ ಪೂಜಾರ ವೀರಮಲ್ಲಪ್ಪ, ಎಸಿ ಮಮತಾ ಹೊಸಗೌಡರ್ ಪಾಲಿಕೆ ಆಯುಕ್ತ ಸ್ಮಾರ್ಟ್ ಸಿಟಿ ಎಂಡಿ ರವೀಂದ್ರ ಮಲ್ಲಾಪುರ, ವಿಶ್ವನಾಥ ಮುದಜ್ಜಿ, ಜಿ.ಪಂ ಉಪ ಕಾರ್ಯದರ್ಶಿ ಆನಂದ್, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕಿ ನಜ್ಮಾ, ಎಸ್‌ಎಲ್‌ಓ ರೇಷ್ಮಾ ಹಾನಗಲ್, ಡಿಹೆಚ್‌ಓ ಡಾ.ನಾಗರಾಜ್, ಡಿಎಸ್‌ಓ ಡಾ.ರಾಘವನ್, ಡಿಎಸ್ ಡಾ.ಜಯಪ್ರಕಾಶ್, ಆರ್‌ಸಿಹೆಚ್‌ಓ ಡಾ.ಮೀನಾಕ್ಷಿ, ಜಿಲ್ಲಾ ಮಲೇರಿಯಾಧಿಕಾರಿ ಡಾ.ನಟರಾಜ್, ಜಿಲ್ಲಾ ಕ್ಷಯರೋಗ ನಿಯಂತ್ರಣಾಧಿಕಾರಿ ಡಾ.ಗಂಗಾಧರ್, ಡಾ. ರೇಣುಕಾರಾಧ್ಯ, ಡಾ.ಮುರಳೀಧರ ಸೇರಿದಂತೆ ತಾಲ್ಲೂಕು ವೈದ್ಯಾಧಿಕಾರಿಗಳು, ಜಿಲ್ಲಾ ಮಟ್ಟದ ಅಧಿಕಾರಿಗಳು ಹಾಜರಿದ್ದರು

### ಆಕ್ಸಿಜನ್ ನಿರ್ವಹಣೆಗೆ ಪ್ರತ್ಯೇಕ ನೋಡಲ್ ಅಧಿಕಾರಿ

ಕೋವಿಡ್ ರೋಗಿಗಳಿಗೆ ಅಗತ್ಯವಿರುವ ಆಕ್ಸಿಜನ್ ಸರಬರಾಜು ಮಾಡಲು ಪ್ರತಿ ವಾರ್ಡುಗಳಿಗೆ ತೆರಳಿ ಯಾರಿಗೆ ಯಾವ ರೀತಿಯ ಆಕ್ಸಿಜನ್ ಅಗತ್ಯವಿದೆ ಎಂದು ವಿಶ್ಲೇಷಿಸಿ ನಿರ್ಧರಿಸಿ ಕ್ರಮ ಕೈಗೊಳ್ಳಲು ಪ್ರತ್ಯೇಕವಾಗಿ ಒಬ್ಬ ತಜ್ಞರನ್ನು ಆಕ್ಸಿಜನ್ ನಿರ್ವಹಣಾ ನೋಡಲ್ ಅಧಿಕಾರಿಯನ್ನಾಗಿ ನೇಮಿಸಲು ನಿರ್ಧರಿಸಲಾಗಿದೆ ಎಂದು ಜಿಲ್ಲಾಧಿಕಾರಿ ತಿಳಿಸಿದ್ದಾರೆ.

## ಸುಧಾ ನಿಧನಕ್ಕೆ ಹೆಚ್.ಕೆ.ಆರ್. ಶೋಕ


ದಾವಣಗೆರೆ,ಏ.24- ಜಿಲ್ಲಾ ಪಂಚಾಯ್ತಿ ಮಾಜಿ ಅಧ್ಯಕ್ಷ ಎ. ಗೋವಿಂದ ರೆಡ್ಡಿ ಅವರ ಪತ್ನಿ ಶ್ರೀಮತಿ ಸುಧಾ ಅವರ ನಿಧನಕ್ಕೆ ಹಿರಿಯ ಕಾರ್ಮಿಕ ಮುಖಂಡ ಹೆಚ್.ಕೆ. ರಾಮಚಂದ್ರಪ್ಪ ಸಂತಾಪ ವ್ಯಕ್ತಪಡಿಸಿದ್ದಾರೆ.

# ಕರ್ಫ್ಯೂಗೆ ಸ್ಪಂದಿಸಿದ ದಾವಣಗೆರೆ

**(1ನೇ ಪುಟದಿಂದ)** ಅತಿ ವಿರಳವಾಗಿತ್ತು.

ಕೆಎಸ್ಸಾರ್ಟಿಸಿ ಬಸ್ ನಿಲ್ದಾಣದಲ್ಲಿ ಪ್ರಯಾಣಿಕರ ಸಂಖ್ಯೆ ವಿರಳವಾಗಿತ್ತು. ಚಾಲಕರು, ನಿರ್ವಾಹಕರು ಅಲ್ಲಲ್ಲಿ ಹರಟೆಯಲ್ಲಿ ತಲ್ಲೀನರಾಗಿದ್ದರು. ಹೊರ ಜಿಲ್ಲೆಯಿಂದ ಬಂದ ಪ್ರಯಾಣಿಕರು ಆಟೋಗಳಿಲ್ಲದೆ ಸ್ವಂತ ವಾಹನ ಅಥವಾ ಕಾಲ್ನಡಿಗೆಯಿಂದಲೇ ಮನೆ ಸೇರಬೇಕಿತ್ತು.

ಮೆಡಿಕಲ್ ಶಾಪ್ ಹಾಗೂ ಪೆಟ್ರೋಲ್ ಬಂಕ್‌ಗಳು ಮಾತ್ರ ತೆರೆದಿದ್ದವು. ಆದರೆ ಗ್ರಾಹಕರ ಸಂಖ್ಯೆ ಕಡಿಮೆ ಇತ್ತು. ಕೆಲ ಮುಖ್ಯ



ರಸ್ತೆಗಳಲ್ಲಿ ಅಡ್ಡವಾಗಿ ಬ್ಯಾರಿಕೇಡ್ ಇಟ್ಟು ಒಮ್ಮುಖ ರಸ್ತೆಗಳನ್ನಾಗಿ ಮಾಡಿ, ಪೊಲೀಸರು ವಾಹನಗಳ ತಪಾಸಣೆ ನಡೆಸುತ್ತಿದ್ದರು.

# ಸಕ್ರಿಯ ಪ್ರಕರಣ: ಬೆಂಗಳೂರೇ ಮೊದಲು

**(1ನೇ ಪುಟದಿಂದ)** ಸೇರಿದಂತೆ, ಎಲ್ಲ ಆಸ್ಪತ್ರೆಗಳಲ್ಲಿ ಸಾಮರ್ಥ್ಯ ಹೆಚ್ಚಿಸಬೇಕು ಎಂದವರು ಹೇಳಿದ್ದಾರೆ.

ಮೇ ಅಂತ್ಯ ಇಲ್ಲವೇ ಜೂನ್ ಮೊದಲ ವಾರದ ವೇಳೆಗೆ ರಾಜ್ಯದಲ್ಲಿ ಕೊರೊನಾ ಪ್ರಕರಣಗಳು ಗರಿಷ್ಠ ಹಂತಕ್ಕೆ ತಲುಪಲಿವೆ ಎಂದೂ ಅವರು ಅಂದಾಜಿಸಿದ್ದಾರೆ.

ಈ ನಡುವೆ ಹೇಳಿಕೆ ನೀಡಿರುವ ಜಯದೇವ ಹೃದ್ರೋಗ ಆಸ್ಪತ್ರೆ ನಿರ್ದೇಶಕ ಸಿ.ಎನ್. ಮಂಜುನಾಥ, ಯುರೋಪ್‌ನಲ್ಲಿ ಕಂಡು ಬಂದ ಅಲೆಯ ಸ್ವರೂಪ ಗಮನಿಸಿ, ಭಾರತದಲ್ಲಿ ಮಾರ್ಚ್, ಇಲ್ಲವೇ ಏಪ್ರಿಲ್ ತಿಂಗಳಲ್ಲಿ ಎರಡನೇ ಅಲೆ ಬರಲಿದೆ ಎಂದು ಅಂದಾಜಿಸಿದ್ದೆ ಎಂದು ಹೇಳಿದ್ದಾರೆ.

ಮೇ ಅಂತ್ಯ ಇಲ್ಲವೇ ಜೂನ್ ಮೊದಲ ವಾರದಲ್ಲಿ ಕೊರೊನಾ ಸಂಖ್ಯೆ ಕಡಿಮೆ ಆಗಬಹುದು. ಆದರೆ, ನಂತರದಲ್ಲಿ ಆರರಿಂದ ಒಂಭತ್ತು ತಿಂಗಳ ಕಾಲ ಜನರ ಸ್ವಭಾವ ಕೊರೊನಾ ತಡೆಗೆ ಅತಿ ಮುಖ್ಯ. ನಾವು ಎಚ್ಚರ ತಪ್ಪಬಾರದು ಎಂದವರು ತಿಳಿಸಿದ್ದಾರೆ.

ಆರೋಗ್ಯ ವ್ಯವಸ್ಥೆ ಸಂಪೂರ್ಣ ಉಸಿರು ಕಟ್ಟಿದೆ. ಮೊದಲ ಹಂತದಲ್ಲಿ ಹಂತ ಹಂತವಾಗಿ ಪ್ರಕರಣಗಳು ಬರುತ್ತಿದ್ದವು. ಹೀಗಾಗಿ ಪ್ರತಿ ಹಂತದಲ್ಲಿ ಪ್ರಕರಣಗಳ ಸಂಖ್ಯೆ 200ರಿಂದ 300ರಷ್ಟು ಏರುತ್ತಿತ್ತು. ಈಗ ಸಾವಿರಗಳ ಸಂಖ್ಯೆಯಲ್ಲಿ ಏರುತ್ತಿದೆ ಎಂದು ಮಂಜುನಾಥ ಹೇಳಿದ್ದಾರೆ. ಬೆಂಗಳೂರಿನಲ್ಲಿ ಈಗ ಐ.ಸಿ.ಯು.ಗಳು ಉಳಿದಿಲ್ಲ ಎಂದು ಬೃಹತ್ ಬೆಂಗಳೂರು ಮಹಾನಗರಪಾಲಿಕೆ ಹೈಕೋರ್ಟ್‌ಗೆ ತಿಳಿಸಿದೆ.

# ದುಡಿಮೆಗೆ ಅವಕಾಶ ನೀಡಿ : ಎಸ್ಸೆಸ್-ಎಸ್ಸೆಸ್ಸೆಂ

**(1ನೇ ಪುಟದಿಂದ)** ಆಗಿರುವ ರೈತರು, ಆಟೋ ಚಾಲಕರು, ಬೀದಿ ಬದಿ ವ್ಯಾಪಾರಸ್ಥರು, ಮನೆ ಕೆಲಸಗಾರರು, ಟ್ಯಾಕ್ಸಿ ಚಾಲಕರು, ಹಮಾಲರು, ಮೆಕ್ಯಾನಿಕ್‌ಗಳು, ಸಣ್ಣ ಉದ್ದಿಮೆದಾರರು, ಅಗತ್ಯ ವಸ್ತುಗಳನ್ನು ಹೊರತು ಪಡಿಸಿ ಅಂಗಡಿಗಳಲ್ಲಿ ಕೆಲಸ ಮಾಡುವವರು ಸೇರಿದಂತೆ, ಬಡವರ ನೆರವಿಗೆ ಜಿಲ್ಲಾಡಳಿತ ಧಾವಿಸಬೇಕೆಂದು ಒತ್ತಾಯಿಸಿದ್ದಾರೆ.

ಅದೇ ರೀತಿ ಕಳೆದ ವರ್ಷ ಕೊರೊನಾ ಸೋಂಕಿತರೊಂದಿಗೆ ಸಂಪರ್ಕ ಹೊಂದಿದವರನ್ನು ದಾವಣಗೆರೆಯ ಲಾಡ್ಜ್‌ಗಳಲ್ಲಿ ಐಸೋಲೇಷನ್ ಮಾಡಲಾಗಿದ್ದು, ಇದುವರೆಗೂ ಸಹ ಲಾಡ್ಜ್ ಮಾಲೀಕರಿಗೆ ಸರ್ಕಾರವೇ ನಿಗದಿಪಡಿಸಿದ್ದ ಬಾಡಿಗೆಯನ್ನು ಇದುವರೆಗೂ ಜಿಲ್ಲಾಡಳಿತ ಸಂದಾಯ ಮಾಡದೇ ಇರುವ ಬಗ್ಗೆ ಗಮನಕ್ಕೆ ಬಂದಿದ್ದು, ಜಿಲ್ಲಾಧಿಕಾರಿಗಳು ಶೀಘ್ರ ಬಾಡಿಗೆ ಪಾವತಿಗೆ ಮುಂದಾಗಬೇಕೆಂದು ಆಗ್ರಹಿಸಿದ್ದಾರೆ.

ಕೊರೊನಾದಿಂದ ಸಾಕಷ್ಟು ಜನರ ಜೀವನಕ್ಕೆ ತೀವ್ರ ತೊಂದರೆ ಉಂಟಾಗಿದೆ. ಆದರೂ ಸಹ ಅನಿವಾರ್ಯವಾಗಿ ಜೀವ ಉಳಿಸಿಕೊಳ್ಳಬೇಕಾದ ಪರಿಸ್ಥಿತಿ ಇದೆ. ಜೀವ ಉಳಿದರೆ ಜೀವನವನ್ನು ಸುಂದರವಾಗಿ ಕಟ್ಟಿಕೊಳ್ಳಬಹುದು ಎಂಬುದನ್ನು ನಾಗರಿಕರು ಮನಗಾಣಬೇಕೆಂದು ತಿಳಿಸಿದ್ದಾರೆ.

ಕರ್ನಾಟಕದ ಗಡಿ ರಾಜ್ಯಗಳಲ್ಲಿ ಕೊರೊನಾ 2ನೇ ಅಲೆ ಅಬ್ಬರಿಸುತ್ತಿದ್ದು,ರಾಜ್ಯದ ಬೆಂಗಳೂರು ಸೇರಿದಂತೆ ಬಹುತೇಕ ಜಿಲ್ಲೆಗಳಲ್ಲಿ ಕೊರೊನಾ ತೀವ್ರವಾಗಿದ್ದು, ದಾವಣಗೆರೆಯಲ್ಲಿ ಕೊರೊನಾ ಹೆಚ್ಚಳವಾಗದಂತೆ ತಡೆಯುವ ಕೆಲಸ ನಮ್ಮಿಂದಲೇ ಆಗಬೇಕಿದ್ದು, ಅವಶ್ಯವಾಗಿ ಹೊರಬರಬೇಕೆಂಬ ಜನರು ಮಾಸ್ಕ್ ಧರಿಸಿ ಅಂತರ ಕಾಪಾಡಿಕೊಳ್ಳುವ ಮೂಲಕ ಜಾಗರೂಕತೆಯಿಂದ ಇರಬೇಕೆಂದು ಮನವಿ ಮಾಡಿದ್ದಾರೆ.

## ವಾರವಿಡೀ ಕರ್ಫ್ಯೂಗೆ ಚಿಂತನೆ

**(1ನೇ ಪುಟದಿಂದ)** ಭಾನುವಾರವಾಗಿದ್ದರಿಂದ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಸೇವೆಗಳು ಸೇರಿದಂತೆ ಬ್ಯಾಂಕ್ ವಹಿವಾಟುಗಳಿಗೆ ರಜೆ ಇದ್ದವು. ಹೀಗಾಗಿ ಅವುಗಳು ಕಾರ್ಯನಿರ್ವಹಿಸದಿರುವುದರಿಂದ ನೌಕರರು ಮತ್ತು ಗ್ರಾಹಕರು ಅತ್ತ ಸುಳಿಯಲಿಲ್ಲ.

ಈ ಮಧ್ಯೆ ಸುದ್ದಿಗಾರರೊಂದಿಗೆ ಮಾತನಾಡಿದ ಗೃಹ ಸಚಿವ ಬಸವರಾಜ್ ಬೊಮ್ಮಾಯಿ ಕೊರೊನಾ ಕಳೆದ ಬಾರಿಗಿಂತ ಈ ಬಾರಿ ಹೆಚ್ಚು ತೀವ್ರವಾಗಿದೆ. ನಿಯಂತ್ರಣಕ್ಕೆ ಸಹಕಾರ ಕೊಡುತ್ತಿದ್ದಾರೆ. ಅವರಲ್ಲೂ ಅರಿವು ಮೂಡಿ ಬಂದಿರುವುದರಿಂದ ಕರ್ಫ್ಯೂ ಯಶಸ್ವಿಯಾಗಿದೆ ಎಂದರು.

ಜನರ ಜವಾಬ್ದಾರಿ ಅರ್ಥ ಮಾಡಿಕೊಂಡು, ಕೊರೊನಾ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಿದರೆ, ಸಾಂಕ್ರಾಮಿಕ ಕೊಂಡಿಯನ್ನು ಕಳಚಬಹುದಾಗಿದೆ ಎಂದರು. ಕರ್ಫ್ಯೂ ಸಂದರ್ಭದಲ್ಲಿ ಯಾವ ರೀತಿ ಬೆಂಬಲ ನೀಡುತ್ತಿದ್ದಾರೋ ಅದೇ ರೀತಿ ಉಳಿದ ಸಂದರ್ಭದಲ್ಲೂ ನೀಡಬೇಕೆಂದು ಮನವಿ ಮಾಡಿಕೊಂಡರು.

ಸೋಮವಾರ ನಡೆಯುವ ಸಂಪುಟ ಸಭೆಯಲ್ಲಿ ಸೋಂಕು ನಿವಾರಣೆಗಾಗಿ ಕೆಲವು ಕಠಿಣ ತೀರ್ಮಾನಗಳನ್ನು ರಾಜ್ಯ ಸರ್ಕಾರ ಕೈಗೊಳ್ಳಲಿದೆ ಎಂದರು.

## ಹಾವೇರಿ : 93 ಪಾಸಿಟಿವ್

ಹಾವೇರಿ, ಏ.24- ಜಿಲ್ಲೆಯಲ್ಲಿ ಇದುವರೆಗೂ ಒಟ್ಟು 93 ಕೋವಿಡ್ ಪಾಸಿಟಿವ್ ಪ್ರಕರಣಗಳು ಪತ್ತೆಯಾಗಿವೆ ಎಂದು ಡಿಹೆಚ್‌ಓ ಮಾಹಿತಿ ನೀಡಿದ್ದಾರೆ.

ಬ್ಯಾಡಗಿ ತಾ. 5, ಹಾನಗಲ್ಲ ತಾ. 28, ಹಾವೇರಿ ತಾ.-05, ಹಿರೇಕೆರೂರು ತಾ.-07, ರಾಣೇಬೆನ್ನೂರು ತಾ.-11, ಸವಣೂರು ತಾ.-05, ಶಿಗ್ಗಾಂವ್ ತಾಲ್ಲೂಕಿನಲ್ಲಿ 23 ಪ್ರಕರಣಗಳು ಹಾಗೂ ಇತರೆ ಪ್ರಕರಣ ಗಳು-08 ಸೇರಿ 92 ಪ್ರಕರಣಗಳು ದಾಖಲಾಗಿದ್ದು, ಕರ್ತವ್ಯ ನಿರತ ಕೊರೊನಾ ವಾರಿಯರ್ಸ್ ಒಬ್ಬರು ಇಂದು ಸೋಂಕಿತರಾಗಿದ್ದಾರೆ. ಈ ದಿನ ಮೂವರು ಪುರುಷ, ಇಬ್ಬರು ಮಹಿಳೆಯರು ಸೇರಿದಂತೆ 5 ರೋಗಿಗಳು ಸಾವನ್ನಪ್ಪಿದ್ದಾರೆ. ಬ್ಯಾಡಗಿ ತಾಲ್ಲೂಕಿನಿಂದ- 2, ಹಾವೇರಿ-1, ರಾಣೇಬೆನ್ನೂರು-1 ಹಾಗೂ ಸವಣೂರು ತಾ.ನಲ್ಲಿ ಒಬ್ಬರು ಸಾವನ್ನಪ್ಪಿದ್ದಾರೆ ಎಂದು ತಿಳಿಸಿದ್ದಾರೆ.

## ಲಕ್ಷ ಡೋಸ್ ಲಸಿಕೆ ಸರಬರಾಜಿಗೆ ಮನವಿ

**(1ನೇ ಪುಟದಿಂದ)** ಕಾರ್ಯದರ್ಶಿಗಳಿಗೆ ಪತ್ರ ಬರೆದಿದ್ದಾರೆ. ಕೋವಿಡ್ ಎರಡನೇ ಅಲೆ ಪ್ರಾರಂಭವಾದ ಮೇಲೆ ಜನರು ಸ್ವಯಂಪ್ರೇರಿತರಾಗಿ ಲಸಿಕೆ ಪಡೆಯಲು ಆಸ್ಪತ್ರೆಗಳಿಗೆ ಧಾವಿಸುತ್ತಿದ್ದಾರೆ. ದಾವಣಗೆರೆ ಜಿಲ್ಲೆಗೆ ಈಗ ಸರಬರಾಜು ಮಾಡುತ್ತಿರುವ ಕೋವಿಡ್ ಲಸಿಕೆಗಳು ಸಾಲುತ್ತಿಲ್ಲ. ಕಳೆದ ಮೂರು ದಿನಗಳಿಂದ ದಾವಣಗೆರೆ ಜಿಲ್ಲೆಯಲ್ಲಿ ಲಸಿಕೆಗಳು ಲಭ್ಯವಿಲ್ಲ ಎಂಬ ವಿಷಯದ ಬಗ್ಗೆ ಸಂಸದರು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಜಿಲ್ಲೆಗೆ ದಿನಾಂಕ ಏ.23ರಂದು ಕೇವಲ 7000 ಡೋಸ್ ಕೋವಿಶೀಲ್ಡ್ ಲಸಿಕೆ ಪೂರೈಕೆಯಾಗಿದೆ ಮತ್ತು ಈಗಾಗಲೇ ಖಾಲಿಯಾಗಿವೆ. ಸಾಕಷ್ಟು ಜನರು ಆಸ್ಪತ್ರೆಗಳಿಗೆ ಆಗಮಿಸಿ ಲಸಿಕೆ ಸಿಗದೇ ಇರುವ ಕಾರಣಕ್ಕೆ ವಾಪಾಸ್ ಹೋಗುತ್ತಿದ್ದಾರೆ ಮತ್ತು ಲಸಿಕೆಗಾಗಿ ಹಾತೊರೆಯುತ್ತಿದ್ದಾರೆ. ಲಸಿಕೆ ಸಿಗದೇ ಇರುವುದು ಜನರಲ್ಲಿ ಆತಂಕ ಸೃಷ್ಟಿಸಿದೆ. ಈ ಹಿನ್ನೆಲೆಯಲ್ಲಿ ಶೀಘ್ರ ಲಕ್ಷ ಡೋಸ್ ಲಸಿಕೆ ಪೂರೈಕೆಗೆ ನಿರ್ದೇಶಿಸುವಂತೆ ಮನವಿ ಮಾಡಿದ್ದಾರೆ

ರಾಷ್ಟ್ರೀಯ ಬಿ.ಜೆ.ಪಿ. ಅಧ್ಯಕ್ಷ ಜೆ.ಪಿ.ನಡ್ಡಾ ಹಾಗೂ ರಾಜ್ಯ ಉಸ್ತುವಾರಿ ಅರುಣ್‌ಸಿಂಗ್ ರವರಿಗೂ ಕೂಡ ಮೇಲ್ ಸಂದೇಶ ಕಳುಹಿಸಿರುವ ಸಂಸದರು, ತುರ್ತಾಗಿ ಲಸಿಕೆಗಳನ್ನು ಪೂರೈಕೆ ಮಾಡಲು ಸಂಬಂಧಿಸಿದವರಿಗೆ ಸೂಕ್ತ ನಿರ್ದೇಶನ ನೀಡಲು ಮನವಿ ಮಾಡಿಕೊಂಡಿದ್ದಾರೆ.

## ಮುರುಗೇಂದ್ರಪ್ಪ ನಿಧನಕ್ಕೆ ನೀಲಗಿರಿ ಸಂತಾಪ

ದಾವಣಗೆರೆ,ಏ.24- ಮಹಾನಗರ ಪಾಲಿಕೆ ಕಿರಿಯ ಅಭಿಯಂತರ ಎನ್. ಮುರುಗೇಂದ್ರಪ್ಪ ಅವರ ನಿಧನಕ್ಕೆ ಕಾಂಗ್ರೆಸ್ ಮುಖಂಡ ಎನ್. ನೀಲಗಿರಿಯಪ್ಪ ಸಂತಾಪ ವ್ಯಕ್ತಪಡಿಸಿದ್ದಾರೆ.


**ಬಿಲ್ಡಿಂಗ್ ಬಾಡಿಗೆಗಿದೆ**
ಚಾಮರಾಜಪೇಟೆ ಸರ್ಕಲ್ ಹತ್ತಿರ, ಕಲ್ಲೇಶ್ವರ ಕಿರಾಣಿ ಅಂಗಡಿ ಮೇಲ್ಭಾಗದಲ್ಲಿ 3 ಮಹಡಿ ಇರುವ 10,000 ಚದುರ ಅಡಿ ವಿಶಾಲವಾದ ಜಾಗ ಇರುವ ಬಿಲ್ಡಿಂಗ್ ಬಾಡಿಗೆಗಿದೆ. ಸಂಪರ್ಕಿಸಿ :
ಮೊ. : 98453 17181

**ಬಂಗ್ಲೆ ಮನೆ ಸೈಟು ಮಾರಾಟಕ್ಕೆ**
ಆಂಜನೇಯ ಬಡಾವಣೆ, ವಿದ್ಯಾನಗರ ವಿನಾಯಕ ಬಡಾವಣೆಯಲ್ಲಿ
ಸೈಟು : 50x80, 70x50, 70x70, 60x40, 50x100. ಮನೆ : 80x100, 50x100, 90x100, 60x60, 40x60 (Duplex)
ಕಿರಣ್ ಬೂಸ್ನೂರ್ (ಏಜೆಂಟ್)
97315-63409, 98440-63409
(ಬಂಗ್ಲೆ ಮನೆ ಲೀಸ್ ಗೆ ಇದೆ)

**ಸೈಟು ಮಾರಾಟಕ್ಕಿದೆ**
20×30 ಅಳತೆಯುಳ್ಳ ಉತ್ತರ-ಪಶ್ಚಿಮ ಕಾರ್ನರ್ ಸೈಟು, ದಾವಣಗೆರೆಯ RTO ಆಫೀಸ್ ಎದುರುಗಡೆ, ಕರೂರು ರಸ್ತೆಯಲ್ಲಿ ಮಾರಾಟಕ್ಕಿದೆ. ಸಂಪರ್ಕಿಸಿ :
97416 80500

**ಮನೆ ಅಡುಗೆ, ಹಳ್ಳಿ ಊಟ**
ಮನೆಯಲ್ಲಿ ತಯಾರಿಸಿದ ಶುದ್ಧ ಸಸ್ಯಹಾರಿ ತಿಂಡಿ, ಊಟ ದೊರೆಯುತ್ತದೆ. ನಿಮ್ಮ ಮನೆಗೇ ತಲುಪಿಸಲಾಗುವುದು. ಕರೆ ಮಾಡಿ.
63635 43487

**ಶ್ರೇಯಸ್ ಉದರ, ಲಿವರ್, ಕರುಳು ರೋಗಗಳ ಚಿಕಿತ್ಸಾ ಕೇಂದ್ರ**
ಡಾ. ಇ.ಆರ್. ಸಿದ್ದೇಶಿ
M.D. (MED), D.M. (Gastro), F.A.C.G. (USA), P.G.C.C. Diab. Care (Aust)
ಉದರ, ಲಿವರ್, ಕರಳು, ಪ್ಯಾನ್‌ಕ್ರಿಯಾಸ್, ಎಂಡೋಸ್ಕೋಪಿ, ಸಕ್ಕರೆ ಕಾಯಿಲೆ ತಜ್ಞರು
8th Main, 8th Cross, P.J. Extension, Davangere.
08192-237325, 94837 23166

**ಮನೆ ಲೀಸ್‌ಗೆ ಬೇಕಾಗಿದೆ**
ಆಂಜನೇಯ ಬಡಾವಣೆ, ಸಿದ್ದವೀರಪ್ಪ ಬಡಾವಣೆ, ಎಂ.ಸಿ.ಸಿ 'ಬಿ' ಬ್ಲಾಕ್, ಡೆಂಟಲ್ ಕಾಲೇಜ್ ಸಮೀಪದಲ್ಲಿ ಮನೆ ಲೀಸ್‌ಗೆ ಬೇಕಾಗಿದೆ. (Non vegetarian)
ಸಂಪರ್ಕಿಸಿ
77605 15452

**ಜಾಗ ಮಾರಾಟಕ್ಕಿದೆ**
ಪಿ.ಜೆ. ಬಡಾವಣೆ, 3ನೇ ಮುಖ್ಯರಸ್ತೆ, ಚೇತನ ಹೋಟೆಲ್ ಹತ್ತಿರ, 80x30 ಅಡಿ ಅಳತೆಯ ಜಾಗ ಮಾರಾಟಕ್ಕಿದೆ. ಆಸಕ್ತರು ಸಂಪರ್ಕಿಸಿ :
97310 55765

**ಸೈಟ್ ಮಾರಾಟಕ್ಕಿದೆ**
ಉತ್ತಮ ಚಂದ್ ಲೇಔಟ್‌ನಲ್ಲಿ 36x46, South East Corner ಸೈಟ್ ಮಾರಾಟಕ್ಕಿದೆ. ಸಂಪರ್ಕಿಸಿ
97403 38990
(ಮಧ್ಯವರ್ತಿಗಳಿಗೆ ಅವಕಾಶವಿಲ್ಲ)

**ತಕ್ಷಣ ಬೇಕಾಗಿದ್ದಾರೆ**
ನುರಿತ ಕಂಪ್ಯೂಟರ್ ಆಪರೇಟರ್-2 (ಕನ್ನಡ ಮತ್ತು ಇಂಗ್ಲಿಷ್)
ಅನುಭವಿ ಸ್ಟಾಫ್ ನರ್ಸ್‌ಗಳು (GNM/ANM), ಸಂಪರ್ಕಿಸಿ
ಆಶ್ರಯ ಆಸ್ಪತ್ರೆ
9886802626, 8792629379

**ಹಿಂದೂ ಅನಕೂಲಸ್ಥ ಯುವಕನಿಗೆ ಯುವತಿ ಬೇಕಾಗಿದೆ. ಬಡವರಿಗೆ ಮೊದಲ ಆದ್ಯತೆ**
73495 44161

**ಬೇಕಾಗಿದ್ದಾರೆ**
ವಿದ್ಯಾನಗರ ಶ್ರೀ ಆಂಜನೇಯ ದೇವಸ್ಥಾನ ಹತ್ತಿರವಿರುವ ಮನೆಯಲ್ಲಿ ಅಡುಗೆ ಮಾಡಲು ಮತ್ತು ಮನೆ ಕೆಲಸಕ್ಕೆ ಮಹಿಳೆ ಬೇಕಾಗಿದ್ದಾರೆ.
ಸಮಯ : ಬೆಳಿಗ್ಗೆ 8 ರಿಂದ ಮಧ್ಯಾಹ್ನ 1.30 ರ ವರೆಗೆ. ಸಂಪರ್ಕಿಸಿ :
98862 22719, 83100 24421

**ಮನೆ ಲೀಸ್/ ಬಾಡಿಗೆಗೆ ಇದೆ**
ಡಬಲ್ ಬೆಡ್‌ರೂಂ 30x40 ಎಸ್.ಎಸ್.ಲೇಔಟ್ 'ಎ' ಬ್ಲಾಕ್, ಬಾಟ್ಲಿ ಬಿಲ್ಡಿಂಗ್ ಹಿಂಭಾಗ. ಸಸ್ಯಹಾರಿಗಳಿಗೆ ಮಾತ್ರ.
9844162191
8970341442

**ಜಂಗಮ ವಧು-ವರ**
ಜಂಗಮ ಇಂಜಿನಿಯರ್, ಡಾಕ್ಟರ್ಸ್, ಲೆಕ್ಚರರ್ಸ್, ಸರ್ಕಾರಿ ಹಾಗೂ ಖಾಸಗಿ ನೌಕರಿಯಲ್ಲಿರುವ ವಧು-ವರರಿಗಾಗಿ ಸಂಪರ್ಕಿಸಿ
ಮೊ: 98807 29108

**ಮನೆ ಲೀಸ್‌ಗೆ ಇವೆ**
ಫಸ್ಟ್ ಫ್ಲೋರ್ 2BHK ವಿತ್ ಅಟ್ಯಾಚ್ ಹಾಗೂ ಎಲ್ಲಾ ಸೌಲಭ್ಯಗಳಿರುವ ಮತ್ತು ಸೆಕೆಂಡ್ ಫ್ಲೋರ್ 1 BHK ವಿತ್ ಅಟ್ಯಾಚ್ ಸೌಲಭ್ಯಗಳಿರುವ ಹೊಸ ಮನೆಗಳು ಲೀಸ್‌ಗೆ ಇವೆ.
#389/G-54, ಎಸ್.ಎಸ್. ಹೈಟೆಕ್ ಆಸ್ಪತ್ರೆ ರಸ್ತೆ, ಶ್ರೀ ಸಾಯಿಬಾಬಾ ದೇವಸ್ಥಾನ ಹಿಂಭಾಗ, ಜಯನಗರ 'ಎ' ಬ್ಲಾಕ್, ದಾವಣಗೆರೆ.
ಮೊ: 98447 10844

**Online Tutions**
From 6th to 10th Std
Bruit abacus and vedics maths
97390 66956

**2 BHK ಮನೆ ಬಾಡಿಗೆಗೆ ಇದೆ**
ಪೂರ್ವ ಬಾಗಿಲು, ದಕ್ಷಿಣಕ್ಕೆ ರಸ್ತೆ, ಅಶೋಕ ನಗರ, 1ನೇ ಕ್ರಾಸ್, ಬಲಭಾಗ ಯರಗುಂಟೆ ಹೆಚ್.ಪಿ ಗ್ಯಾಸ್ ಗೋಡೌನ್ ಎದುರು, ಕೊಂಡಜ್ಜಿ ರಸ್ತೆ, ದಾವಣಗೆರೆ.
ಮೊ: 88841 67704

**ಬೇಕಾಗಿದ್ದಾರೆ**
ವಿದ್ಯಾನಗರದಲ್ಲಿ ಮನೆ ಕೆಲಸ ಮಾಡಲು ಬೇಕಾಗಿದ್ದಾರೆ. ಆಕರ್ಷಕ ವೇತನ. ಲಿಂಗಾಯಿತ ಮಹಿಳೆಯರಿಗೆ ಆದ್ಯತೆ. ಸಂಪರ್ಕಿಸಿ
ಮೊ. : 98808 53626

**ಮನೆ ಬಾಡಿಗೆಗಿದೆ**
ನಂ.961/5, ಫಸ್ಟ್ ಫ್ಲೋರ್, 3BHK, ಬೋರ್‌ವೆಲ್ ಹಾಗೂ ನಲ್ಲಿ ನೀರಿನ ಸೌಕರ್ಯವಿದ್ದು, 2 ಬಾತ್‌ರೂಂ, ದೊಡ್ಡ ಹಾಲ್ ಇದೆ. ಶಿವಕುಮಾರಸ್ವಾಮಿ ಬಡಾವಣೆ, 2ನೇ ಹಂತ, ಹದಡಿ ರಸ್ತೆ, ಹೆಚ್.ಪಿ ಪೆಟ್ರೋಲ್ ಬಂಕ್ ಹಿಂಭಾಗ, ದಾವಣಗೆರೆ.
ಮೊ: 72591 47046

**ಮನೆ ಬಾಡಿಗೆಗೆ**
(ಗ್ರೌಂಡ್ ಫ್ಲೋರ್) ಸಿಂಗಲ್ ಬೆಡ್ ರೂಂ, AEH, ಕಾರ್ಪೊರೇಷನ್ ನೀರು ಮತ್ತು ಬೋರ್‌ವೆಲ್ ನೀರಿನ ಸೌಲಭ್ಯವಿರುವ ಸುಸಜ್ಜಿತ ಮನೆ ಜೈನ್ ಲೇಔಟ್ 2ನೇ ಮೇನ್ ಎಂಟ್ರೇನ್ಸ್, ಕುಂದುವಾಡ ರಸ್ತೆ, ದಾವಣಗೆರೆ. ಸಂಪರ್ಕಿಸಿ
99862 26977

**ಮನೆ ಬಾಡಿಗೆಗಿದೆ**
ಸುಸಜ್ಜಿತವಾದ ಬೋರ್‌ವೆಲ್ ನೀರಿನ ವ್ಯವಸ್ಥೆಯಿರುವ 2 BHK ನೆಲ ಮಹಡಿ ಮನೆ ಎಸ್.ಎಸ್. ಆಸ್ಪತ್ರೆ ರಸ್ತೆಯಲ್ಲಿ ಇರುವ ಜಯನಗರ 'ಬಿ' ಬ್ಲಾಕ್‌ನಲ್ಲಿ ಲಭ್ಯವಿದೆ. ಸಂಪರ್ಕಿಸಿ
99022 92018
94815 84360

**Commercial Property for sale**
infront of aralimara bus stop 15x35 ground and 2BHK at 1st floor
Contact 92417 50559

ಶ್ರೀ ಗುರು ಮರುಳಸಿದ್ದೇಶ್ವರ ಸ್ವಾಮಿ ಸೇವಾ ಸಂಸ್ಥೆ (ರಿ.)
**ಹಿಂದೂ ವಧು-ವರರ ಮಾಹಿತಿ ಕೇಂದ್ರ**
www.hindusmatrimony.com
ನಮ್ಮಲ್ಲಿ ಎಲ್ಲಾ ತರಹದ ಹಿಂದೂ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಬಾಪೂಜಿ ಹಾಸ್ಪಿಟಲ್ ಎದುರು, 8ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ-2.
94481-59303, 94834 63783

**ಹೈಟೆಕ್ ವಯೋವೃದ್ಧರ ಆರೈಕೆ ಕೇಂದ್ರ**
ವಯೋವೃದ್ಧರು, ಬೆಡ್‌ರಿಡನ್, ಪೇಷೆಂಟ್ಸ್, ಅಂಗವಿಕಲರನ್ನು ನಮ್ಮಲ್ಲಿ ಊಟ ವಸತಿಯೊಂದಿಗೆ ನೋಡಿಕೊಳ್ಳಲಾಗುವುದು. ನಿಟುವಳ್ಳಿ ಹೊಸ ಬಡಾವಣೆ, ದಾವಣಗೆರೆ.
89711 92936
76250 15036

**ಮಳಿಗೆ ಬಾಡಿಗೆಗೆ ಇದೆ**
ದಾವಣಗೆರೆ ನಗರದ ಪಿ.ಬಿ. ರೋಡ್, ಸಂಗೊಳ್ಳಿರಾಯಣ್ಣ ಸರ್ಕಲ್ ಹತ್ತಿರ, ಬೋರ್ ನೀರು, ಅಟ್ಯಾಚ್ಡ್ ಬಾತ್ ರೂಂವುಳ್ಳ 15x40 ಅಳತೆಯ ಮಳಿಗೆ ಕಮರ್ಷಿಯಲ್ ಕಾಂಪ್ಲೆಕ್ಸ್/ ಯಾವುದಾದರೂ ವ್ಯಾಪಾರಕ್ಕಾಗಿ/ಆಫೀಸ್/ ಶೋರೂಂಗೆ ಯೋಗ್ಯವಿದ್ದು ಬಾಡಿಗೆಗೆ ಇದೆ.
86601 25491
98453 63900, 95353 96666

**ಹಳೆ ತಗಡು ಬೇಕಾಗಿದೆ (ಉಪಯೋಗಿಸಿರುವ)**
Junk Sheet / Cement Sheet
99644 68051 (Whatsapp No)
80730 55886

**JOBS**
MCS ACADEMY
Training & Placement Cell
98444 92888

**ನೀರಿನ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**ಸೈಟು ಮಾರಾಟಕ್ಕಿದೆ**
ಶಿವಕುಮಾರ ಸ್ವಾಮಿ ಬಡಾವಣೆ, 2ನೇ ಹಂತದಲ್ಲಿ ಮುಖ್ಯ ರಸ್ತೆಗೆ 55x40 ಅಳತೆಯ ದಕ್ಷಿಣ ಮತ್ತು ಪಶ್ಚಿಮ ರಸ್ತೆ ಇರುವ ಸಂಜೀವಿನಿ ಆಂಜನೇಯ ದೇವಸ್ಥಾನದ ರಸ್ತೆ, 7ನೇ ಕ್ರಾಸ್ ಕಾರ್ನರ್ ಸೈಟ್ ಮಾರಾಟಕ್ಕಿದೆ. ಸಂಪರ್ಕಿಸಿ
94483 73997
97318 25700

**2 BHK HOUSE FOR RENT**
2 BHK, Borewell/Corporation water
# 859/5, 1st main, 2nd cross, Shivakumar swamy Badavane, 1st Phase, Hadadi Road, Davangere.
94490 33202

**ಸಿಂಗಲ್ ಬೆಡ್ ರೂಂ ಮನೆ ಬಾಡಿಗೆಗೆ ಇದೆ**
ಎನ್.ಆರ್ ರಸ್ತೆ ಜೈನ್ ಟೆಂಪಲ್ ಹತ್ತಿರ ಒಂದು ಬೆಡ್ ರೂಂ ಇರುವ ಮನೆ ಬಾಡಿಗೆಗಿದೆ ಸಂಪರ್ಕಿಸಿ
70199 88456

**ವಾಹ್ ಚಾಯ್ !! ರಿಚ್ ಚಾಯ್ !!**
SRK TEA
ಶ್ರೀ ರಾಮಕೃಷ್ಣ ಕಾಫಿ ಕಂಪನಿ
ಮಂಡಿಪೇಟೆ, ದಾವಣಗೆರೆ.
ಮೊಬೈಲ್ : 94487 27084

**ತಕ್ಷಣ ಬೇಕಾಗಿದ್ದಾರೆ**
ಸ್ಯಾಮ್ಸನ್ ಡಿಸ್ಟಿಲರೀಸ್, ದುಗ್ಗಾವತಿ ಹಾಗೂ SS ಆಸ್ಪತ್ರೆ, ಬಾಪೂಜಿ ಆಸ್ಪತ್ರೆ ಹಾಗೂ ದಾವಣಗೆರೆ ಸುತ್ತಮುತ್ತಲು 8 ಗಂಟೆ ಹಾಗೂ 12 ಗಂಟೆ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್ಸ್ ತಕ್ಷಣ ಬೇಕಾಗಿದ್ದಾರೆ. ESI-PF ಸೌಲಭ್ಯ ಇರುತ್ತದೆ.
ಅಸೋಸಿಯೇಟೆಡ್ ಎಂಟರ್ ಪ್ರೈಸಸ್, ದಾವಣಗೆರೆ.
99169 29713, 90605 45500, 97390 89022

**ಸಾಲಗಳಿಗೆ ಸಂಪರ್ಕಿಸಿ**
(ಬಡ್ಡಿ ದರ ವಾರ್ಷಿಕ 7% ರಿಂದ ಪ್ರಾರಂಭ)
ಮನೆ ಕಟ್ಟಲು, ಮನೆ ಖರೀದಿ, ಸೈಟ್ ಖರೀದಿ, ಕಟ್ಟಿರುವ ಮನೆಗೆ ಸಾಲ, ಬೇರೆ ಬ್ಯಾಂಕ್‌ನಲ್ಲಿ ತೆಗೆದುಕೊಂಡಿರುವ ಸಾಲ ವರ್ಗಾವಣೆ ಮತ್ತು ಅಧಿಕ ಸಾಲಕ್ಕಾಗಿ ಸಂಪರ್ಕಿಸಿ.
(ಸಂಬಳ ಮತ್ತು ವ್ಯವಹಾರದಾರರಿಗೆ ಮಾತ್ರ)
73385 80345

**UPS BATTERY & RO PURIFIERS**
Sales & Service
PEACE ENTERPRISES
83100 42490, 99013 18277
98801 56667

**ಬೇಕಾಗಿದ್ದಾರೆ**
SSLC ಅಥವಾ PUC ಆದ ಮಹಿಳಾ ಅಭ್ಯರ್ಥಿಗಳು ಬಿಲ್ ಮಾಡಲು ಮತ್ತು ಪ್ಯಾಕ್ ಮಾಡಲು ಸಗಟು ಔಷಧಿ ಅಂಗಡಿಯಲ್ಲಿ ಬೇಕಾಗಿದ್ದಾರೆ. ಭೇಟಿಯಾಗುವ ಸಮಯ : ಸಂಜೆ 6.30ರ ನಂತರ
ಶ್ರೀ ಗುರು ಎಂಟರ್‌ಪ್ರೈಸಸ್
#579, 6ನೇ ಮುಖ್ಯರಸ್ತೆ, ಪಿಜೆ ಬಡಾವಣೆ, ದಾವಣಗೆರೆ-2.


## ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 23.04.2021ರಂದು ನಿಧನರಾದ ದಾವಣಗೆರೆ ಮಹಾನಗರ ಪಾಲಿಕೆ ಕಿರಿಯ ಅಭಿಯಂತರರಾದ

**ಎನ್. ಮುರುಗೇಂದ್ರಪ್ಪ**

ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ. ಮೃತರ ಆತ್ಮಕ್ಕೆ ಚಿರಶಾಂತಿ ಸಿಗಲೆಂದು ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ದಯಪಾಲಿಸಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

- ✦ ಡಾ|| ಶಾಮನೂರು ಶಿವಶಂಕರಪ್ಪ, ಶಾಸಕರು,
- ✦ ಎಸ್.ಎಸ್ ಮಲ್ಲಿಕಾರ್ಜುನ್, ಮಾಜಿ ಸಚಿವರು
- ✦ ದಿನೇಶ್ ಕೆ. ಶೆಟ್ಟಿ, ನಗರ ಪಾಲಿಕೆ ಮಾಜಿ ಸದಸ್ಯರು,
- ✦ ಎ. ನಾಗರಾಜ್, ನಗರ ಪಾಲಿಕೆ ವಿರೋಧ ಪಕ್ಷದ ನಾಯಕರು
- ✦ ನಲ್ಲೂರು ಎಸ್. ರಾಘವೇಂದ್ರ, ಕಾಂಗ್ರೆಸ್ ಮುಖಂಡರು.
- ✦ ಗಿರೀಶ್ ಹೆಚ್. ಕಾಂಗ್ರೆಸ್ ಮುಖಂಡರು.
- ✦ ನವೀನ್, ಕಾಂಗ್ರೆಸ್ ಮುಖಂಡರು.

## ಎಂ.ಜಿ. ನೀಲಮ್ಮನವರು ನಿಧನ



ದಾವಣಗೆರೆ ಸಿಟಿ, ದೇವರಾಜ್ ಅರಸ್ ಬಡಾವಣೆ, ಬಿ ಬ್ಲಾಕ್ 11ನೇ ಕ್ರಾಸ್ ವಾಸಿ ದಿ|| ಶ್ರೀ ಮಾಗಾನಹಳ್ಳಿ ಓಂಕಾರಪ್ಪನವರ (ನಿವೃತ್ತ ಮ್ಯಾನೇಜರ್, ದಾವಣಗೆರೆ ಅರ್ಬನ್ ಕೋ.ಆಪ್. ಬ್ಯಾಂಕ್ ಲಿ.,) ಧರ್ಮಪತ್ನಿ

**ಶ್ರೀಮತಿ ಎಂ.ಜಿ. ನೀಲಮ್ಮ (MGN)**

(81 ವರ್ಷ) ನಿವೃತ್ತ ಉಪನ್ಯಾಸಕಿ, DIET ದಾವಣಗೆರೆ ಇವರು ದಿನಾಂಕ : 24.04.2021ರ ಬೆಳಿಗ್ಗೆ 8.40ಕ್ಕೆ ನಿಧನರಾಗಿರುತ್ತಾರೆ. ಓರ್ವ ಪುತ್ರ, ಇಬ್ಬರು ಹೆಣ್ಣುಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಇವರ ಅಂತ್ಯಕ್ರಿಯೆಯನ್ನು ದಿನಾಂಕ : 25.4.2021ರ ಭಾನುವಾರ ಬೆಳಿಗ್ಗೆ 9.00 ಗಂಟೆಗೆ ರುದ್ರಭೂಮಿ, ಬೂದಾಳ್ ರೋಡ್ (ಗಾಂಧಿನಗರ) ದಾವಣಗೆರೆಯಲ್ಲಿ ನೆರವೇರಿಸಲಾಗುವುದು.

**ಇಂತಿ ದುಃಖತಪ್ತ ಕುಟುಂಬ ವರ್ಗದವರು**

ಫೋ. : 70198 47517, 99023 91586, 99804 21609

## 16ನೇ ವರ್ಷದ ಪುಣ್ಯಸ್ಮರಣೆ



**ದಿ|| ಶ್ರೀ ಯಜಮಾನ ಕಂದನಕೋವಿ ಶರಣಪ್ಪ**

ನೀವು ನಮ್ಮನ್ನಗಲಿ ಇಂದಿಗೆ 16 ವರ್ಷಗಳಾದವು, ನೀವು ಹಾಕಿ ಕೊಟ್ಟ ಮಾರ್ಗದರ್ಶನ, ಆದರ್ಶಗಳು ನಮಗೆ ದಾರಿ ದೀಪ.


ಸದಾ ನಿಮ್ಮ ಸ್ಮರಣೆಯಲ್ಲಿರುವ:

* ಪತ್ನಿ : ಶ್ರೀಮತಿ ಗೌರಮ್ಮ
* ಶ್ರೀಮತಿ ಶೋಭಾ, ಶ್ರೀ ವಾಗೀಶ ಪಂಡಿತಾರಾಧ್ಯ, ಅಮೇರಿಕಾ.
* ಶ್ರೀಮತಿ ಶ್ರೀ ಡಾ. ಕೆ.ಎಸ್. ಗಂಗಾಧರ, ಪ್ರಾಂಶುಪಾಲರು, ದಾವಣಗೆರೆ.
* ಶ್ರೀಮತಿ ಸೌಮ್ಯ ಶ್ರೀ ಕೆ.ಎಸ್. ವೀರಭದ್ರ
* ಶ್ರೀಮತಿ ತಾರಾ ಶ್ರೀ ಸುರೇಶ ನಾಗನ ಗೌಡರ, ಗೋವಾ
* ಚಿ|| ಆದಿತ್ಯಾ * ಕು|| ತೃಪ್ತಿ * ಚಿ|| ವೀರೇಶ್ * ಕು|| ಯಶಸ್ವಿ * ಕು. ಭುವನ
* ಶ್ರೀಮತಿ ಶ್ರೀ ಕೆ.ಬಿ. ಚಂದ್ರಶೇಖರಪ್ಪ ಹಾಗೂ ಸಹೋದರರು, ಕಂದನಕೋವಿ.
* ಶ್ರೀಮತಿ ಶ್ರೀ ಕೆ.ಬಿ. ಮುದ್ದಪ್ಪ, ನಿ.ಸ. ನಿರ್ದೇಶಕರು, ಕಂದನಕೋವಿ.
* ಶ್ರೀಮತಿ ಶ್ರೀ ಪಾಟೀಲ ಉದಯಕುಮಾರ ಹಾಗೂ ಸಹೋದರರು, ದಾವಣಗೆರೆ.
* ಶ್ರೀಮತಿ ಶ್ರೀ ಎ.ಸಿ. ಜಗದೀಶ್ವರ ವಕೀಲರು, ದಾವಣಗೆರೆ.

ಬಂಧು-ಮಿತ್ರರು ಹಾಗೂ ಬೆಳ್ಳೂಡಿ ವಂಶಸ್ಥರು.


**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು


## ಸಾವಿತ್ರಮ್ಮ ಜಾಧವ್ ನಿಧನ



ಪಿ.ಜೆ. ಬಡಾವಣೆ, ರೈತರ ಬೀದಿ ವಾಸಿ ದಿ. 30 ನಂಬರ್ ಬೀಡಿ ಜಿ.ಎನ್. ನಿಂಗೋಜಿರಾವ್ ಇವರ ಧರ್ಮಪತ್ನಿ ಸಾವಿತ್ರಮ್ಮ ಜಾಧವ್ (99) ಇವರು ದಿನಾಂಕ 24.04.2021ರ ಶನಿವಾರ ರಾತ್ರಿ 9.45ಕ್ಕೆ ನಿಧನರಾದರು. ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 25.04.2021ರ ಭಾನುವಾರ ಮಧ್ಯಾಹ್ನ 12 ಗಂಟೆಗೆ ಪಿ.ಬಿ. ರಸ್ತೆಯಲ್ಲಿರುವ ವೈಕುಂಠಧಾಮದಲ್ಲಿ ನೆರವೇರಲಿದೆ.

## ರಾಜ್ಯ : 29 ಸಾವಿರ ಸೋಂಕಿತರು

ಬೆಂಗಳೂರು, ಏ. 24 – ರಾಜ್ಯದಲ್ಲಿ ಶುಕ್ರವಾರ 29,438 ಕೊರೊನಾ ಸೋಂಕಿತರು ಕಂಡು ಬಂದಿದ್ದು, ಇದೇ ದಿನ 208 ಜನ ಸಾವನ್ನಪ್ಪಿದ್ದಾರೆ ಎಂದು ಆರೋಗ್ಯ ಇಲಾಖೆ ತಿಳಿಸಿದೆ.

ಇದೇ ದಿನ 9,058 ಸೋಂಕಿತರು ಗುಣ ಹೊಂದಿ ಬಿಡುಗಡೆಯಾಗಿದ್ದಾರೆ. ಬೆಂಗಳೂರು ನಗರ ಒಂದರಲ್ಲೇ 17,342 ಸೋಂಕಿತರು ಪತ್ತೆಯಾಗಿದ್ದು, ನಗರದಲ್ಲಿ 149 ಜನ ಸಾವನ್ನಪ್ಪಿದ್ದಾರೆ. ನಗರದಲ್ಲೀಗ 1.62 ಲಕ್ಷ ಸಕ್ರಿಯ ಸೋಂಕಿತರಿದ್ದಾರೆ.

ತುಮಕೂರಿನಲ್ಲಿ 1,559 ಸೋಂಕಿತರು ಪತ್ತೆಯಾಗಿದ್ದಾರೆ. ಹಾಸನದಲ್ಲಿ 823, ಕಲಬುರಗಿಯಲ್ಲಿ 791, ಬಳ್ಳಾರಿಯಲ್ಲಿ 731, ಮಂಡ್ಯದಲ್ಲಿ 688 ಹಾಗೂ ಬೆಂಗಳೂರು ಗ್ರಾಮಾಂತರಲ್ಲಿ 684 ಸೋಂಕಿತರು ಪತ್ತೆಯಾಗಿದ್ದಾರೆ.

# ರಾಶಿ ಭವಿಷ್ಯ

**ದಿನಾಂಕ : 25.04.2021 ರಿಂದ 01.05.2021**

**- ಜಯತೀರ್ಥಾಚಾರ್ ವಡೇರ್, ದಾವಣಗೆರೆ.**

**ಮೇಷ (ಅಶ್ವಿನಿ, ಭರಣಿ, ಕೃತ್ತಿಕಾ)**
**(ಚೂ.ಚೇ.ಚೋ.ಲ.ಲಿ.ಉ.ಲೇ.ಲೊ.ಅ.)**

ಕೆಲಸ, ಕಾರ್ಯಗಳಲ್ಲಿ ವೇಗ ಪಡೆಯುವ ನಿಟ್ಟಿನತ್ತ ಪ್ರಯತ್ನ ಮಾಡಿರಿ. ಈ ವಿಷಯದಲ್ಲಿ ಮಾನಸಿಕ ಸ್ಥಿರತೆ ಕಾಪಾಡಿಕೊಳ್ಳಿ, ಹೊಸ ಯೋಜನೆಗಳನ್ನು ಶ್ರದ್ಧೆಯಿಂದ ಮಾಡಿ, ಕುಲದೇವತಾ ದರ್ಶನ ಮಾಡಿ. ಶುಭಕಾರ್ಯಗಳಲ್ಲಿ ಭಾಗವಹಿಸುವಿರಿ, ಅಪರೂಪದ ಗೆಳೆಯರನ್ನೂ ಹಾಗೂ ಬಂಧು-ಬಳಗದವರನ್ನು ಭೇಟಿಯಾಗುವಿರಿ. ಮಹಿಳೆಯರಿಗೆ ಸಂತಸದ ದಿನಗಳು. ಆರೋಗ್ಯ ತಪಾಸಣೆ ವೇಳೆ ಸಕಾರಾತ್ಮಕ ವರದಿ, ಖಾಸಗಿ ಕಂಪನಿಯಲ್ಲಿರುವ ಅರೆಕಾಲಿಕ ನೌಕರರಿಗೆ ಕೆಲಸ ಖಾಯಂ ಆಗಲಿದೆ. ಆದಾಯ ಉತ್ತಮವಾಗಲಿದೆ, ವಿದ್ಯಾರ್ಥಿಗಳಿಗೆ ಹಲವು ಅವಕಾಶಗಳು, ಕೃಷಿಕರಿಗೆ ಸರ್ಕಾರಿ ಸೌಲಭ್ಯಗಳು ಭಾನು-ಮಂಗಳ-ಗುರು-ಶುಭ ದಿನಗಳು.

**ವೃಷಭ (ಕೃತ್ತಿಕಾ, 2,3,4, ರೋಹಿಣಿ, ಮೃಗ 1,2)**
**(ಇ.ಉ.ಎ.ಒ.ವ.ವಿ.ವು.ವೆ.ವೋ)**

ಕೆಲವೊಮ್ಮೆ ಜಿಪುಣತನವನ್ನು ಬಿಟ್ಟು ಖರ್ಚು ಮಾಡಲೇ ಬೇಕಾದ ಪ್ರಸಂಗ, ಗುರು-ಹಿರಿಯರ ಆಶೀರ್ವಾದದಿಂದ ಗಳಿಕೆಯಲ್ಲಿ ಏರಿಕೆ ಕಂಡುಬರಲಿದೆ. ಸರ್ಕಾರಿ ನೌಕರರು ಸದ್ಯದ ಪರಿಸ್ಥಿತಿಯಲ್ಲಿ ಸಾಕಷ್ಟು ಎಚ್ಚರದಿಂದಿರಿ, ಮೇಲಾಧಿಕಾರಿಗಳ ಅಥವಾ ಸಹೋದ್ಯೋಗಿಗಳ ಸಲಹೆ-ಸೂಚನೆಗಳನ್ನು ಅವಶ್ಯಕತೆ ಇದ್ದಲ್ಲಿ ಸ್ವೀಕರಿಸಿ. ಮಹಿಳೆಯರು ಅಪರಿಚಿತರೊಂದಿಗೆ ಹಣ-ಕಾಸಿನ ವ್ಯವಹಾರ ಇಟ್ಟುಕೊಳ್ಳುವುದು ಅಷ್ಟು ಸೂಕ್ತವಲ್ಲ. ಮತ್ಯಾರದೋ ಒತ್ತಡಕ್ಕೆ ಒಳಗಾಗಿ ಪ್ರಯಾಣಗಳನ್ನು ಮಾಡಬೇಡಿ. ಹಿರಿಯರ ಸಲಹೆಗಳು ಅನುಭವಯುಕ್ತ ಎಂಬುದು ನೆನಪಿರಲಿ. ಸೋಮ, ಬುದ, ಶುಕ್ರ ಶುಭ ದಿನಗಳು.

**ಮಿಥುನ (3,4, ಆರಿದ್ರಾ, ಪುನರ್ವಸು 1,2,3)**
**(ಕ.ಕಿ.ಕು.ಘ, ಔ, ಚ.ಕೆ.ಕೋ.ಹ.)**

ವಿದ್ಯಾರ್ಥಿಗಳು ಕಳೆದುಕೊಂಡಿದ್ದ ದಾಖಲೆಗಳು ಮರಳಿ ಪಡೆಯುವಿರಿ, ಆಗಲಾರದ ಕೆಲಸಗಳನ್ನು ಒಪ್ಪಿಕೊಂಡು ವೃಥಾ ಬಳಲುವಿರಿ. ಆಕಸ್ಮಿಕ ಧನಪ್ರಾಪ್ತಿ, ಮಕ್ಕಳ ವಿದ್ಯಾಭ್ಯಾಸಕ್ಕೆ ಸಹಾಯವಾಗಲಿದೆ. ಸಮಾಜ ಸೇವೆಯ ಮಹಿಳೆಯರಿಗೆ ಬಿಡುವಿಲ್ಲದ ಕಾರ್ಯಕ್ರಮಗಳು, ಸಂಗಾತಿಯಿಂದ ಸಿಹಿ ಸಮಾಚಾರ, ರಾಜಕಾರಣಿಗಳು ಎಚ್ಚರದ ಹೆಜ್ಜೆಗಳನ್ನಿಡುವುದು ಉತ್ತಮ. ಸ್ನೇಹಿತರ ಭೂ ವಿವಾದವೊಂದರಲ್ಲಿ ನೀವು ಸಿಕ್ಕಿಹಾಕಿಕೊಳ್ಳುವಿರಿ, ಮತ್ತೊಬ್ಬರ ಸ್ವತ್ತಿಗೆ ಆಸೆಪಡಬೇಡಿ. ಆದಾಯದ ಮೂಲದಲ್ಲಿ ಸಾಧಾರಣವಾಗಿರುವುದರಿಂದ ಖರ್ಚು-ವೆಚ್ಚಗಳ ಮೇಲೆ ಹಿಡಿತ ಸಾಧಿಸಲು ಪ್ರಯತ್ನಿಸಿ. ಸೋಮ, ಬುಧ, ಗುರು, ಶುಭ ದಿನಗಳು.

**ಕರ್ಕಾಟಕ (ಪುನ 4, ಪುಷ್ಯ, ಆಶ್ಲೇಷ)**
**(ಹಿ.ಹು.ಹೆ.ಹೂ.ಡ.ಡಿ.ಡು.ಡೆ.ಡೋ)**

ವಕೀಲ ವೃತ್ತಿಯಲ್ಲಿರುವವರಿಗೆ ಆರ್ಥಿಕಾಭಿವೃದ್ಧಿ, ವಾಹನ ಕೊಳ್ಳುವ ಯೋಗ, ವ್ಯವಹಾರದಲ್ಲಿ ಸಕಾಲಿಕ ಚಿಂತನೆಯಿಂದ ಆಗಬಹುದಾದ ನಷ್ಟವನ್ನು ತಪ್ಪಿಸ ಬಹುದು. ಕುಟುಂಬದ ಅನೇಕ ಸಮಸ್ಯೆಗಳು ಮಂಜಿನಂತೆ ಕರಗುವವು, ವಿದ್ಯಾರ್ಥಿಗಳು ಅಪೇಕ್ಷಿತ ವಿಷಯದಲ್ಲಿ ಅಧ್ಯಯನ ಮುಂದುವರೆಸುವುದು ಉತ್ತಮ. ವದಂತಿಗಳಿಗೆ ಹೆಚ್ಚಿನ ಮಹತ್ವ ಕೊಡಬೇಕಾಗಿಲ್ಲ. ಆದಾಯಕ್ಕೆ ತಕ್ಕಂತೆ ಸಂಸಾರ ನಿರ್ವಹಣೆಯಲ್ಲಿ ಯಶಸ್ವಿಯಾಗುವಿರಿ. ಒಪ್ಪಿಕೊಂಡ ಜವಾಬ್ದಾರಿಯನ್ನು ಪ್ರಾಮಾಣಿಕವಾಗಿ ನಿರ್ವಹಿಸಿ, ದಿನಸಿ ಚಿಲ್ಲರೆ ವ್ಯಾಪಾರಿಗಳಿಗೆ ತುಸು ನಷ್ಟ. ಅತಿಯಾದ ಮನರಂಜನೆ ಒಳ್ಳೆಯದಲ್ಲ. ಅಪೇಕ್ಷಿತ ಕೋರಿಕೆಗಳು ಈಡೇರಲಿವೆ. ಭಾನು, ಮಂಗಳ, ಬುಧ ಶುಭ ದಿನಗಳು.

**ಸಿಂಹ ( ಮಘ, ಪುಬ್ಬ, ಉತ್ತರ 1)**
**(ಮ.ಮಿ.ಮು.ಮೋ.ವೆ.ಟ.ಟಿ.ಟು.ಟೆ)**

ಬೆಲೆಬಾಳುವ ವಸ್ತುಗಳ ಬಗ್ಗೆ ಎಚ್ಚರವಿರಲಿ, ಬಂಧುಗಳೊಂದಿಗೆ ವಿನಾಕಾರಣ ಮನಸ್ತಾಪಬೇಡ. ಜೀವನ ಸಂಗಾತಿಯಿಂದ ಉಡುಗೊರೆ, ಗುರು-ಹಿರಿಯರ ನಿಂದನೆ ಶ್ರೇಯಸ್ಕರವಲ್ಲ. ಗಾಳಿ ಮಾತುಗಳನ್ನು ನಂಬಿ ಸ್ನೇಹಿತರೊಂದಿಗೆ ವಾಗ್ವಾದ ಮಾಡಬೇಡಿ. ಅಪರೂಪಕ್ಕೆ ಬರಲಿರುವ ಅತಿಥಿಗಳಿಗೆ ವಿಶೇಷ ಆತಿಥ್ಯ, ಈ ವಾರ ನೀವು ಹಮ್ಮಿಕೊಂಡಿರುವ ಎಲ್ಲಾ ಕೆಲಸಗಳು ಸುಸೂತ್ರವಾಗಿ ನಡೆದು, ಮಾನಸಿಕ ನೆಮ್ಮದಿ ಪಡೆಯುವಿರಿ. ಅರ್ಥವಿಲ್ಲದ ಅಲೆದಾಟ ವ್ಯರ್ಥವೆಂಬುದು ನೆನಪಿರಲಿ. ಮಾನಾಪಮಾನಗಳನ್ನು ಸಮಾನವಾಗಿ ಸ್ವೀಕರಿಸುವುದರಲ್ಲೇ ನಿಮ್ಮ ಯಶಸ್ಸು, ಗುರುಗಳ ಅನುಗ್ರಹ ಸಂಪಾದಿಸಿರಿ. ಆದಾಯದಲ್ಲಿ ತೀವ್ರ ಹೆಚ್ಚಳ. ಭಾನು-ಮಂಗಳ-ಬುಧ -ಶುಭ ದಿನಗಳು.

**ಕನ್ಯಾ (ಉತ್ತರಾ 2,3,4, ಹಸ್ತಾ, ಚಿತ್ತಾ 1,2)**
**(ಟೋ.ಪ.ಪಿ.ಪು.ಷ.ಣ.ಠ.ಪೆ.ಪೋ)**

ಸಾಂದರ್ಭಿಕ ವಿಷಯಗಳನ್ನು ಬಿಟ್ಟು ಬೇರೆ ವಿಷಯಗಳ ಬಗ್ಗೆ ಚರ್ಚಿಸಲು ಹೋಗಬೇಡಿ. ನಿರೀಕ್ಷೆಗೂ ಮೀರಿದ ಸಹಾಯ ಸಿಗಲಿದೆ. ವಿಶೇಷ ಸಭೆಗಳಲ್ಲಿ ಭಾಗವಹಿಸುವಿರಿ, ಬದಲಾವಣೆ ಬದುಕಿನಲ್ಲಿ ಅನಿವಾರ್ಯವಾಗಲಿದೆ. ಚಿಕ್ಕಮಕ್ಕಳ ಆರೋಗ್ಯವನ್ನು ಅಲಕ್ಷಿಸಬೇಡಿ. ಸಂಪಾದನೆ ಜೋರಾಗಲಿದ್ದು ಉಳಿತಾಯದ ಬಗ್ಗೆ ತುಸು ಯೋಚಿಸುವುದು ಉತ್ತಮ. ಹೊಸಮನೆ ಕಟ್ಟುವ ಅಥವಾ ಆಸ್ತಿ ಖರೀದಿಸುವ ವಿಚಾರವಿದ್ದಲ್ಲಿ ಈಗ ನಿರ್ಧಾರ ತೆಗೆದುಕೊಳ್ಳಲು ಸರಿಯಾದ ಸಮಯ. ಅವಿವಾಹಿತರಿಗೆ ಕಂಕಣಭಾಗ್ಯ, ಶ್ರಮ-ಶ್ರದ್ಧೆಯಿಂದ ಮಾಡುವ ಕಾರ್ಯಗಳು ಕೀರ್ತಿಯನ್ನು ತರಲಿವೆ. ಪುಣ್ಯಕ್ಷೇತ್ರಗಳ ದರ್ಶನದಿಂದ ಆತ್ಮವಿಶ್ವಾಸ ಹೆಚ್ಚಲಿದೆ. ರೈತಾಪಿ ಜನರು ಎಚ್ಚರದಿಂದಿರುವುದು ಉತ್ತಮ. ಮಂಗಳ-ಬುಧ-ಗುರು-ಶುಭ ದಿನಗಳು.

**ತುಲಾ (ಚಿತ್ತಾ 3,4, ಸ್ವಾತಿ, ವಿಶಾಖ 1,2,3)**
**(ರ.ರಿ.ರು.ರೆ.ರೊ.ತ.ತಿ.ತು.ತೆ.)**

ಕೋರ್ಟ್-ಕಛೇರಿಗಳಲ್ಲಿ ತೀರ್ಮಾನ ನಿಮ್ಮಂತೆ ಬರಲಿದೆ. ಬಂಧುಗಳ ಯೋಗಕ್ಷೇಮ ವಿಚಾರಿಸಲು ಪ್ರಯಾಣ, ಸಂಸಾರದಲ್ಲಿ ಸುಖ-ಶಾಂತಿ, ಹೆಚ್ಚು ಒತ್ತಡದ ವಾತಾವರಣದಲ್ಲಿ ಕೆಲಸ ಮಾಡುವುದು ಆರೋಗ್ಯದ ದೃಷ್ಟಿಯಿಂದ ಒಳ್ಳೆಯದಲ್ಲ, ಹಿರಿಯರ ಮನಸ್ಸನ್ನು ಅರಿತು ನಡೆಯುವುದನ್ನು ರೂಢಿಸಿಕೊಳ್ಳಿ. ನಂಬಿಸಿ ದ್ರೋಹ ಮಾಡುವವರ ಬಗ್ಗೆ ಸಾಕಷ್ಟು ಎಚ್ಚರದಿಂದಿರಿ. ನಿಮ್ಮ ಸೌಜನ್ಯದ ನಡೆಯೇ ಸಹೋದ್ಯೋಗಿಗಳಲ್ಲಿ ಗೌರವ ಹೆಚ್ಚಿಸಲಿದೆ. ಬೇರೆಯವರ ವಾಹನಗಳನ್ನು ಚಾಲಿಸಲು ಹೋಗಬೇಡಿ. ಶಸ್ತ್ರ ವೈದ್ಯರಿಗೆ ಹೆಚ್ಚಿನ ಬೇಡಿಕೆ ಬರಲಿದೆ. ಮಡದಿ-ಮಕ್ಕಳು ಮನರಂಜನೆ ಬಯಸುವರು. ಗುರು-ಶುಕ್ರ-ಶನಿ-ಶುಭ ದಿನಗಳು.

**ವೃಶ್ಚಿಕ (ವಿಶಾಖ 4, ಅನೂ, ಜೇಷ್ಠ)**
**(ತೊ.ನ.ನಿ.ನು.ನೆ.ನೋ.ಯ.ಯು.)**

ನಿಮ್ಮ ಎಲ್ಲಾ ಕೆಲಸ, ಕಾರ್ಯಗಳು ಸುಗಮವಾಗಿ ಕೈಗೂಡಿದರೂ, ಯಾವುದೋ ಒಂದು ಅತೃಪ್ತಿ , ಈ ಹಿಂದೆ ಆರಂಭಿಸಿದ್ದ ಸ್ವಂತ ಉದ್ಯೋಗದಲ್ಲಿ, ಅನೇಕ ಅಡಚಣೆಗಳು, ಆತಂಕ, ಅನಿಶ್ಚಿತತೆ. ತುಸು ತಾಳ್ಮೆ ಹಾಗೂ ಹಿರಿಯರ ಅನುಭವಯುಕ್ತ ಸಲಹೆಗಳನ್ನು ತಗೆದುಕೊಳ್ಳಿ, ನೈತಿಕ ಬಲದಿಂದ ನಿಮ್ಮ ಎದುರಾಳಿಗಳ ಮೇಲೆ ಗಾಢ ಪ್ರಭಾವ ಬೀರುವಿರಿ. ಆದಾಯದ ಮೂಲದಲ್ಲಿ ಹೆಚ್ಚಳ, ಅನಿರೀಕ್ಷಿತ ಖರ್ಚು-ವೆಚ್ಚಗಳು, ಹಿತಶತ್ರುಗಳ ವಿಚಾರದಲ್ಲಿ ಉಡಾಫೆ ಸಲ್ಲದು. ಹಳೇ ಕಾಯಿಲೆಗಳು ಮರುಕಳಿಸದಂತೆ ಎಚ್ಚರವಹಿಸಿರಿ. ಸೋದರಿಯ ಕಡೆಯಿಂದ ಬರಲಿರುವ ನೆರವನ್ನು ತೆಗೆದುಕೊಳ್ಳಿ. ವಿಷ್ಣು ಸಹಸ್ರನಾಮ ಪಠಿಸಿ. ಮಂಗಳ, ಬುಧ, ಶುಕ್ರ ಶುಭ ದಿನಗಳು.

**ಧನಸ್ಸು (ಮೂಲ, ಪೂರ್ವಾಷಾಡ, ಉತ್ತರಾಷಾಡ)**
**(ಯೆ.ಯೋ. ಬ.ಬಿ.ಬು.ಧ.ಫ.ಡ.ಬೆ.)**

ಅನುಭವಿಗಳ ಮಾತನ್ನು ಕೇಳಿ ನಡೆಯಿರಿ, ಇಲ್ಲವಾದಲ್ಲಿ ನಷ್ಟದ ಸರಪಳಿ ಅನಿವಾರ್ಯವಾಗಬಹುದು. ಎಗ್ಗಿಲ್ಲದ ಭೋಜನ ಕೂಟದಿಂದ ಸಂಧಿವಾತ, ಬೆನ್ನುನೋವು, ಅನಾರೋಗ್ಯ ಸಮಸ್ಯೆ, ನಿರ್ಧಾರಿತ ಮದುವೆ ಮಾತುಕತೆ, ಮಧ್ಯಸ್ಥರ ನೆರವಿನಿಂದ ಸರಿಹೋಗಲಿದೆ. ಮಕ್ಕಳು ವ್ಯವಹಾರದಲ್ಲಿ ತೋರುವ ಬೇಜವಾಬ್ದಾರಿತನ ನಿಮ್ಮನ್ನು ಇಕ್ಕಟ್ಟಿಗೆ ಸಿಲುಕಿಸುವುದು. ಆದಾಯದಲ್ಲಿ ಹೆಚ್ಚಳ, ಬಂಧುಗಳೊಂದಿಗೆ ನಿಷ್ಠೂರದ ಮಾತುಗಳನ್ನಾಡಬೇಡಿ. ಸ್ನೇಹಿತರು ಕೊಡುವ ಕೆಲವು ಸಲಹೆಗಳು ನಿಮಗೆ ಉಪಯುಕ್ತವಾಗಲಿವೆ. ಅನಿರೀಕ್ಷಿತವಾಗಿ ಸಾಧು-ಸಂತರ ಭೇಟಿಯಾಗುವುದರಿಂದ ನಿಮ್ಮ ಆತ್ಮವಿಶ್ವಾಸ ಹೆಚ್ಚಲಿದೆ. ಭಾನು-ಸೋಮ-ಗುರು-ಶುಭ ದಿನಗಳು.

**ಮಕರ (ಉತ್ತರಾಷಾಢ 2,3,4, ಶ್ರವಣ, ಧನಿಷ್ಠಾ 1,2)**
**(ಜೊ.ಜ.ಜಿ.ಜೆ.ಶಿ.ಶು.ಶೇ.ಶೋ.ಗ.ಗಿ)**

ಇಷ್ಟು ದಿನ ಪಕ್ಷಕ್ಕಾಗಿ ನಿಷ್ಠೆಯಿಂದ ದುಡಿದ ನಿಮ್ಮ ಮೇಲೆ ವರಿಷ್ಠರ ಕೃಪಾಕಟಾಕ್ಷ, ಆದರೆ ನಿಮ್ಮ ಹಿಂಬಾಲಕರ ಬಗ್ಗೆ ಎಚ್ಚರದಿಂದಿರಿ. ಸಾಲಗಳು ಮರಳಿ ಬಂದು, ಹಣ-ಕಾಸಿನ ಸಮಸ್ಯೆಗಳನ್ನು ಬಗೆಹರಿಸಲಿವೆ. ಸದ್ಯದ ಮಟ್ಟಿಗೆ ಯಾರೊಂದಿಗೇ ಆಗಲಿ ವಿನಾಕಾರಣ ಮಾತಿಗೆ ಮಾತನ್ನು ಬೆಳೆಸಬೇಡಿ, ಮಕ್ಕಳ ವಿದ್ಯಾಭ್ಯಾಸದಲ್ಲಿ ನಿರೀಕ್ಷೆಗೆ ಮೀರಿದ ಯಶಸ್ಸು, ಮನಸ್ಸಿಗೆ ನೆಮ್ಮದಿ ಮೂಡಲಿದೆ. ಯಾವುದೇ ಕಾರಣಕ್ಕೂ ಕೆಲಸ ಕಾರ್ಯಗಳಲ್ಲಿ, ಆಸಕ್ತಿ ಕಳೆದುಕೊಳ್ಳಬೇಡಿ. ಆದಾಯಕ್ಕೆ ತಕ್ಕಂತೆ ಖರ್ಚು ಉತ್ತಮ. ನೆರೆಹೊರೆಯವರೊಂದಿಗೆ ಸೌಹಾರ್ದದಿಂದಿರಿ, ಬ್ಯಾಂಕ್ ನೌಕರರಿಗೆ ಕರ್ತವ್ಯದಲ್ಲಿ ಉದಾಸೀನ, ಚಿಕ್ಕಮಕ್ಕಳನ್ನು ವಿದ್ಯುತ್, ಬಿಸಿ ಪದಾರ್ಥ ಅಥವಾ ಬೆಂಕಿ ಯಿಂದ ದೂರವಿರಿ, ಸಹಪಾಠಿಗಳ ಭೇಟಿ ಸಂತಸ ತರಲಿದೆ, ಬುಧ, ಶುಕ್ರ, ಶನಿ ಶುಭ ದಿನಗಳು.

**ಕುಂಭ (ಧನಿಷ್ಠಾ, ಶತಭಿಷಾ, ಪೂರ್ವಾಭಾದ್ರ 1,2,3)**
**(ಗು.ಗೆ.ಗೊ.ಸ.ಸಿ.ಸು.ಸೆ.ಸೋ.ದ)**

ವ್ಯಾಪಾರ ವ್ಯವಹಾರಗಳಲ್ಲಿ ಲಾಭ-ನಷ್ಟಗಳ ಏರಿಳಿತ, ಗ್ರಾಹಕರೊಂದಿಗೆ ಸೌಹಾರ್ದತೆಯಿಂದ ವರ್ತಿಸಿ, ಅಪಾಯಕಾರಿ ಸ್ಥಳಗಳಲ್ಲಿ ಕೆಲಸ ಮಾಡುವವರು ಬಹಳ ಎಚ್ಚರದಿಂದಿರಿ, ಕ್ರೀಡಾಪಟುಗಳಿಗೆ ಸಾಮರ್ಥ್ಯ ಹೆಚ್ಚಿಸಿಕೊಳ್ಳಲು ಅತ್ಯುತ್ತಮ ತರಬೇತುದಾರರು ದೊರೆಯಲಿದ್ದಾರೆ. ಮತ್ತೊಬ್ಬರ ಹಣ-ಕಾಸಿನ ವಿಚಾರದಲ್ಲಿ ಜಾಮೀನುದಾರರಾದಲ್ಲಿ ಅಪಾಯವನ್ನು ಆಹ್ವಾನಿಸಿದಂತೆ. ಹೊಸ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವ ಮೊದಲು ಅದಕ್ಕೆ ಬೇಕಾದ ಆರ್ಥಿಕ ಮೂಲ ಸರಿಯಾಗಿ ಮಾಡಿಕೊಳ್ಳಿ. ನಿರುದ್ಯೋಗಿಗಳಿಗೆ ಅನೇಕ ಅವಕಾಶಗಳು ಬರಲಿದ್ದು, ಉತ್ತಮವಾದುದನ್ನು ಆಯ್ಕೆಮಾಡಿಕೊಳ್ಳಿ, ಆರೋಗ್ಯದ ವಿಚಾರದಲ್ಲಿ ರಾಜಿ ಬೇಡ. ಬೇರೆಯವರ ವಾಹನಗಳನ್ನು ಚಾಲಿಸಲು ಹೋಗಬೇಡಿ. ಭಾನು – ಶುಕ್ರ -ಶನಿ -ಶುಭದಿನಗಳು.

**ಮೀನ (ಪೂರ್ವಾಭಾದ್ರ 4, ಉತ್ತರಾಭಾದ್ರ, ರೇವತಿ)**
**(ದಿ.ದು.ಖ.ಝ.ಥ.ದೆ.ದೋ.ಖ.ಚ.ಚಿ.)**

ಮತ್ತೊಬ್ಬರೊಂದಿಗೆ ದುಡ್ಡಿನ ವ್ಯವಹಾರ ಮಾಡುವಾಗ ಎಚ್ಚರದಿಂದಿರಿ, ಮೈಮರೆವು ಭಾರೀ ನಷ್ಟವನ್ನುಂಟುಮಾಡೀತು. ಉದ್ಯೋಗದಲ್ಲಿ ಭಾರೀ ಬದಲಾವಣೆ, ಸ್ನೇಹಿತರಿಂದ ನೆರವು, ವ್ಯಾಪಾರದಲ್ಲಿ ಉತ್ಸಾಹ, ಮಹಿಳೆಯರು ಬೆಲೆಬಾಳುವ ವಸ್ತುಗಳ ವಿಚಾರದಲ್ಲಿ ಮೋಸ ಹೋಗುವಿರಿ, ಬಿಡುವಿಲ್ಲದ ಕೆಲಸದಿಂದ ಆರೋಗ್ಯದಲ್ಲಿ ತುಸು ವ್ಯತ್ಯಾಸ, ಸರ್ಕಾರಿ ನೌಕರರು ತಮ್ಮ ಕರ್ತ್ಯವ್ಯದಲ್ಲಿ ದಕ್ಷತೆಯೊಂದಿಗೆ ಸುಧಾರಿಸುವರು. ಆಪ್ತ ಬಂಧುಗಳ ಅನಾರೋಗ್ಯ ಸಮಸ್ಯೆ ನಿಮ್ಮ ಖಿನ್ನತೆಗೆ ಕಾರಣವಾಗಲಿದೆ. ಯಂತ್ರಗಳ ಬಿಡಿಭಾಗ ಮಾರಾಟದಿಂದ ಸಾಕಷ್ಟು ಲಾಭ ಕಾಣುವಿರಿ. ಮಗನ ಉನ್ನತ ವ್ಯಾಸಂಗಕ್ಕೆ ಆರ್ಥಿಕ ನೆರವು, ಸಾಧ್ಯವಾದಷ್ಟು ಗುರುದೇವತಾ ಸೇವೆಯನ್ನು ಮಾಡಿರಿ. ಹೊರ ಸಂಚಾರ ಅಷ್ಟು ಒಳ್ಳೆಯದಲ್ಲ. ಮತ್ತೊಬ್ಬರ ಭಾವನೆಗಳನ್ನು ಗೌರವಿಸುವುದನ್ನು ಕಲಿಯಿರಿ. ಹೆಚ್ಚುತ್ತಿರುವ ಆದಾಯ ನೆಮ್ಮದಿ ತರಲಿದೆ. ಭಾನು–ಮಂಗಳ-ಗುರು-ಶುಭ ದಿನಗಳು.

# ಕೊರೊನಾ ತಡೆಗಟ್ಟುವಲ್ಲಿ ಬಿಎಲ್‌ಒಗಳ ಸಹಕಾರ ಅತ್ಯಗತ್ಯ

ಹರಿಹರ, ಏ.24- ನಗರಸಭೆ ಸಭಾಂಗಣ ದಲ್ಲಿ ತಹಶೀಲ್ದಾರ್ ಕೆ. ಬಿ. ರಾಮಚಂದ್ರಪ್ಪ, ಪೌರಾಯುಕ್ತೆ ಎಸ್. ಲಕ್ಷ್ಮಿ, ಆರೋಗ್ಯಾಧಿಕಾರಿ ಡಾ. ಚಂದ್ರಮೋಹನ್, ಸೇರಿದಂತೆ, ಇತರೆ ಅಧಿಕಾರಗಳೊಂದಿಗೆ ಕೊರೊನಾ ರೋಗ ತಡೆಗಟ್ಟಲು ಬಿಎಲ್‌ಒರವರ ಮಹತ್ವದ ಸಭೆಯನ್ನು ಆಯೋಜಿಸಿ, ಅವರಿಗೆ ಮಾರ್ಗದರ್ಶನ ನೀಡಲಾಯಿತು.

**ಹರಿಹರ ಬಿಎಲ್‌ಒಗಳ ಸಭೆಯಲ್ಲಿ ತಹಶೀಲ್ದಾರ್ ರಾಮಚಂದ್ರಪ್ಪ**



ಈ ವೇಳೆ ಮಾತನಾಡಿದ ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪ, ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಕೊರೊನಾ ದಿನದಿಂದ ದಿನಕ್ಕೆ ಅಧಿಕ ಪ್ರಮಾಣದಲ್ಲಿ ಹರಡುತ್ತಿದ್ದು, ಅದನ್ನು ತಡೆಗಟ್ಟಲು ಬಿಎಲ್‌ಒ ಅವರ ಸಹಕಾರ ಬಹಳ ಅತ್ಯಗತ್ಯವಾಗಿದೆ.

ನಗರದ ಪ್ರತಿಯೊಂದು ಮನೆ ಮನೆಗಳಿಗೆ ತೆರಳಿ ರೋಗದ ಬಗ್ಗೆ ಮನವರಿಕೆ ಮಾಡಿ ಅವರಿಗೆ ಲಸಿಕೆಯನ್ನು ಹಾಕಿಸುವ ಕೆಲಸವನ್ನು ಮುತುವರ್ಜಿಯಿಂದ ಮಾಡಬೇಕು ಎಂದರು.

ನಗರಸಭೆ ಪೌರಾಯುಕ್ತೆ ಎಸ್. ಲಕ್ಷ್ಮಿ ಮಾತನಾಡಿ ನಗರದಲ್ಲಿ ಕೊರೊನಾ ತಡೆಗಟ್ಟಲು ಪ್ರತಿಯೊಂದು ವಾರ್ಡ್‌ಗಳಲ್ಲಿ ಸ್ವಚ್ಛತೆಗೆ ಹೆಚ್ಚು ಆದ್ಯತೆ ನೀಡಲಾಗುತ್ತದೆ.

ನಗರದ ಎಲ್ಲಾ ಬಡಾವಣೆಯಲ್ಲಿ ರೋಗ ನಿರೋಧಕ ಔಷಧಿ ಸಿಂಪಡಣೆ ಮಾಡುವುದಕ್ಕೆ ನಗರಸಭೆ ಆರೋಗ್ಯ ಇಲಾಖೆಯ ಸಿಬ್ಬಂದಿಗಳಿಗೆ ಸೂಚನೆ ನೀಡಲಾಗಿದೆ. ನಗರದಲ್ಲಿನ ಎಲ್ಲಾ ಬಡಾವಣೆಗೆ ನಗರಸಭೆ ಕಸದ ವಾಹನಗಳು ಹೋದ ಸಮಯದಲ್ಲಿ ಕೊರೊನಾ ರೋಗದ ಬಗ್ಗೆ ಜಾಗೃತಿ ಮೂಡಿಸುವುದಕ್ಕೆ ಜನರಿಗೆ ತಿಳಿಸಲು ಮೈಕ್ ವ್ಯವಸ್ಥೆ ಮಾಡಲಾಗಿದೆ.

ಆರೋಗ್ಯ ಇಲಾಖೆಯ ಡಾ. ಚಂದ್ರ ಮೋಹನ್ ಮಾತನಾಡಿ, ನಮ್ಮ ಇಲಾಖೆಯ ಜೊತೆಗೆ ಕಳೆದ ಬಾರಿ ಕೊರೊನಾ ರೋಗವನ್ನು ಹೋಗಲಾಡಿಸಲು ಬಿಎಲ್‌ಒ, ಅಂಗನವಾಡಿ ಕಾರ್ಯಕರ್ತೆಯರು ಮತ್ತು ಅವರ ಸಹಾಯಕಿಯರು ಮತ್ತು ಆಶಾ ಕಾರ್ಯಕರ್ತರ ಸಹಕಾರ ಬಹಳ ಹೆಚ್ಚಿನ ಪ್ರಮಾಣದಲ್ಲಿ ಇತ್ತು. ಕೆಲಸವನ್ನು ಬಹಳ ಪ್ರಾಮಾಣಿಕತೆಯಿಂದ ಮಾಡಿದ್ದರ ಪರಿಣಾಮವಾಗಿ ಕಳೆದ ಬಾರಿ ಕೊರೊನಾ ರೋಗ ತಡೆಗಟ್ಟಲು ಸಾಧ್ಯವಾಯಿತು ಎಂದರು.

ಈ ಸಂದರ್ಭದಲ್ಲಿ ಬಿಇಒ ಬಸವರಾಜಪ್ಪ, ಸಿಡಿಪಿಒ ನಿರ್ಮಲ ಇನ್ನಿತರರು ಹಾಜರಿದ್ದರು.

### ಕೊರೊನ - ೨

ಅಪ್ಪಳಿಸಿದ ಎರಡನೇ ಅಲೆ
ಜೋರಾಗಿದೆ ಕೊರೊನ ದಾಂಧಲೆ
ಅತಿರೇಕಕ್ಕೇರಿದ ಸೋಂಕಿನ
ಪ್ರಮಾಣ
ಸೋಂಕಿತರ ಸ್ಥಿತಿಯಾಗಿದೆ ದಾರುಣ

ವೈರಾಣುವಿಗಿಲ್ಲ ಅಂಕೆ
ಏರುತ್ತಿದೆ ಸಾವಿನ ಸಂಖ್ಯೆ
ಸಾಲು ಹಚ್ಚಿವೆ ಶವಗಳು
ಅನಾಥವಾಗಿ ವಿದಾಯ ಹೇಳುತ್ತಿವೆ
ದೇಹಗಳು

ತರ್ಕ ಮಾಡದೇ ಲಸಿಕೆ ಹಾಕಿಸಿ
ದಯಮಾಡಿ ನಿಯಮ ಪಾಲಿಸಿ
ವೈಯುಕ್ತಿಕ ಸ್ವಾಸ್ಥ್ಯ ಕಾಪಾಡಿ ಅಂತರ
ಪಾಲಿಸಿ
ನಿಮ್ಮ ಉಸಿರು ನಿಮ್ಮದೇ ಜವಾಬ್ದಾರಿ

**- ಅನುಪಮ ವಿರುಪಾಕ್ಷಪ್ಪ,**
ದಾವಣಗೆರೆ

# ಮಲೇಬೆನ್ನೂರಿನಲ್ಲಿ ವಾರದ ಕರ್ಫ್ಯೂ ಯಶಸ್ವಿ



ಮಲೇಬೆನ್ನೂರು, ಏ.24- ಮಹಾಮಾರಿ ಕೊರೊನಾ 2ನೇ ಅಲೆಯನ್ನು ನಿಯಂತ್ರಿಸುವು ದಕ್ಕಾಗಿ ರಾಜ್ಯ ಸರ್ಕಾರ ಆದೇಶ ಮಾಡಿದ್ದ ವೀಕೆಂಡ್ ಕರ್ಫ್ಯೂಗೆ ಮಲೇಬೆನ್ನೂರಿನಲ್ಲಿ ಉತ್ತಮ ಬೆಂಬಲ ವ್ಯಕ್ತವಾಯಿತು.

ಬೆಳಿಗ್ಗೆ 10 ರವರೆಗೆ ಮಾತ್ರ ಅಗತ್ಯ ವಸ್ತುಗಳ ಮಾರಾಟ ಅಂಗಡಿಗಳು ತೆರೆದಿದ್ದವು. ಅಷ್ಟರೊಳಗೆ ಜನರು ತಮಗೆ ಬೇಕಾದ ತರಕಾರಿ, ಕಿರಾಣಿ ಇತ್ಯಾದಿ ಸಾಮಾನುಗಳನ್ನು ಖರೀದಿಸಿದರು. ನಂತರ ಪೊಲೀಸರು ಮೆಡಿಕಲ್ ಷಾಪ್, ಪೆಟ್ರೋಲ್ ಬಂಕ್‌ಗಳನ್ನು ಹೊರತು ಪಡಿಸಿ, ಎಲ್ಲಾ ಅಂಗಡಿ ಮುಂಗಟ್ಟುಗಳನ್ನು ಬಂದ್ ಮಾಡಿಸಿದರು. ಮಧ್ಯಾಹ್ನ 12 ರ ಹೊತ್ತಿಗೆ ಮಲೇಬೆನ್ನೂರು ಸಂಪೂರ್ಣ ಲಾಕ್‌ಡೌನ್ ಆಗಿತ್ತು.

ಪಿಎಸ್‌ಐ ವೀರಬಸಪ್ಪ ಅವರ ನೇತೃತ್ವದಲ್ಲಿ ಪೊಲೀಸರು ಕರ್ಫ್ಯೂವನ್ನು ಬಿಗಿಗೊಳಿಸಿದ್ದರು. ಒಟ್ಟಿನಲ್ಲಿ ವೀಕೆಂಡ್ ಕರ್ಫ್ಯೂ ಮಲೇಬೆನ್ನೂರಿನಲ್ಲಿ ಸಕ್ಸಸ್ ಆಯಿತು. ಆದರೆ, ಹಳ್ಳಿಗಳಲ್ಲಿ ಕರ್ಫ್ಯೂ ಎಂದರೆ ಏನು ಎಂದು ಕೇಳುವಂತಿತ್ತು.

ಹಳ್ಳಿಯಲ್ಲಿ ಕರ್ಫ್ಯೂ ಎಫೆಕ್ಟ್ ಅಷ್ಟಾಗಿ ಕಂಡು ಬರಲಿಲ್ಲ. ಜನ ಎಂದಿನಂತೆ ತಮ್ಮ ಹೊಲ -ಮನೆ ಕೆಲಸಗಳಲ್ಲಿದ್ದರು. ಭಾನುವಾರ ಮದುವೆ ಮುಹೂರ್ತ ಇರುವುದರಿಂದ ಶನಿವಾರ ಸಂಜೆ ಹಳ್ಳಿಗಳಲ್ಲಿ ಮದುವೆ ಸಿದ್ದತೆ ನಡೆದಿತ್ತು.

**ತಹಶೀಲ್ದಾರ್ ಸಭೆ :** ವೀಕೆಂಡ್ ಕರ್ಫ್ಯೂ ನಡುವೆ ತಹಶೀಲ್ದಾರ್ ಕೆ.ಬಿ.ರಾಮಚಂದ್ರಪ್ಪ ಅವರು ಪುರಸಭೆಯಲ್ಲಿ ಕೊರೊನಾ ನಿಯಂತ್ರಣಕ್ಕಾಗಿ ಅಧಿಕಾರಿಗಳ ಸಭೆ ನಡೆಸಿದರು.

ಕೊರೊನಾ ಪಾಸಿಟಿವ್ ಬಂದಂತಹ ವ್ಯಕ್ತಿಗಳ ಪ್ರಥಮ ಹಾಗೂ ದ್ವಿತೀಯ ಸಂಪರ್ಕಿತರನ್ನು ಪತ್ತೆ ಮಾಡಿ, ನಿಗದಿತ ನಮೂನೆಯಲ್ಲಿ ಮಾಹಿತಿ ಸಂಗ್ರಹಿಸಿ, ಪ್ರತಿ ದಿನ ಮಧ್ಯಾಹ್ನ 12 ಗಂಟೆಯ ಒಳಗಾಗಿ ಪುರಸಭೆಯ ಆರೋಗ್ಯ ನಿರೀಕ್ಷಕ ಗುರುಪ್ರಸಾದ್ ಅವರಿಗೆ ನೀಡುವಂತೆ ತಹಶೀಲ್ದಾರ್ ರಾಮಚಂದ್ರಪ್ಪ ಅವರು ಬಿಎಲ್‌ಒಗಳಿಗೆ ತಾಕೀತು ಮಾಡಿದರು.

ವೈದ್ಯಾಧಿಕಾರಿ ಡಾ. ಲಕ್ಷ್ಮಿದೇವಿ ಮಾತನಾಡಿ, ಪಟ್ಟಣದ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಕೊರೊನಾ ಟೆಸ್ಟ್‌ಗಳನ್ನು ಹೆಚ್ಚಿಸಲಾಗಿದೆ. ಪಾಸಿಟಿವ್ ವ್ಯಕ್ತಿಗಳ ಪ್ರಥಮ ಹಾಗೂ ದ್ವಿತೀಯ ಸಂಪರ್ಕಿತರನ್ನು ಪತ್ತೆ ಮಾಡಿದರೆ ಕೊರೊನಾ ಸೋಂಕಿನ ಕೊಂಡಿಯನ್ನು ಕಡಿತ ಮಾಡಿದಂತಾಗುತ್ತದೆ. ಕೋವಿಡ್ 2ನೇ ಅಲೆಯಲ್ಲಿ ಪಟ್ಟಣದಲ್ಲಿ ಇದುವರೆಗೆ 5 ಜನ ಸೋಂಕಿತರು ಮಾತ್ರ ಪತ್ತೆಯಾಗಿದ್ದಾರೆ ಎಂದರು.

ಉಪತಹಶೀಲ್ದಾರ್ ಆರ್.ರವಿ ಮಾತನಾಡಿದರು. ಈ ಬಾರಿ ವಾರ್ಡ್ ರೀತಿ ಅನುಕೂಲ ಮಾಡಿಕೊಡಿ ಎಂದು ಅಂಗನವಾಡಿ ಕಾರ್ಯಕರ್ತರಾದ ಶಬಾನಾ ಬಾನು, ಚಂದ್ರಮ್ಮ ಉಮಾದೇವಿ, ಮಂಜುಳ ಮನವಿ ಮಾಡಿದರು.

ಬಿಎಲ್‌ಒ ನಿರಂಜನ್, ದಂಡಿ ತಿಪ್ಪೇಸ್ವಾಮಿ, ಪರಮೇಶ್ವರಪ್ಪ, ಪ್ರೇಮಲೀಲಾ, ಖಲೀಲ್ ಮಾತನಾಡಿ, ಗುರುತು ಪತ್ರ ಹಾಗೂ ಕಳೆದ ಬಾರಿ ಕೆಲಸ ಮಾಡಿದ ಭತ್ಯೆ ಕೆಲವರಿಗೆ ನೀಡಿಲ್ಲ. ಕಳೆದ ಬಾರಿ ರಜಾ ಕಾಲದಲ್ಲಿ ಕೆಲಸ ಮಾಡಿದ ಸಮಯದ 'ಗಳಿಕೆ ರಜಾ' ಸೌಲಭ್ಯ ನೀಡಲು ಆಗ್ರಹಿಸಿದರು.


ಪುರಸಭೆ ಮುಖ್ಯಾಧಿಕಾರಿ ದಿನಕರ್, ಅಧಿಕಾರಿಗಳಾದ ಉಮೇಶ್, ಗುರುಪ್ರಸಾದ್, ಪ್ರಭು, ನವೀನ್, ನಾಡ ಕಚೇರಿಯ ಕಂದಾಯ ನಿರೀಕ್ಷಕ ಆನಂದ್, ಗ್ರಾಮ ಲೆಕ್ಕಾಧಿಕಾರಿ ಕೊಟ್ರೇಶ್ ಮತ್ತಿತರರು ಸಭೆಯಲ್ಲಿದ್ದರು.

**33 ಕೇಸ್ :** ಇದರ ಮಧ್ಯೆ ಶನಿವಾರ ಹರಿಹರ ತಾಲ್ಲೂಕಿನಲ್ಲಿ ಹಿರಿಯ ಆರೋಗ್ಯ ಸಹಾಯಕ ಎಂ.ಉಮಣ್ಣ ಸೇರಿ 33 ಜನರಿಗೆ ಕೊರೊನಾ ಸೋಂಕು ದೃಢಪಟ್ಟಿದೆ.

# ಡಿಎಸ್‌ಎಸ್ ಹೆಸರು ದುರ್ಬಳಕೆ ಮಾಡದಂತೆ ಮನವಿ

ದಾವಣಗೆರೆ, ಏ.24- ಪ್ರೊ. ಬಿ. ಕೃಷ್ಣಪ್ಪ ಸ್ಥಾಪಿತ ಕರ್ನಾಟಕ ದಲಿತ ಸಂಘರ್ಷ ಸಮಿತಿ ಎನ್ನುವ ಹೆಸರನ್ನು ಮುಂಬರುವ ದಿನಗಳಲ್ಲಿ ಯಾವುದೇ ಸಂಘಟನೆಗಳು ಬಳಕೆ ಮಾಡುವಂತಿಲ್ಲ. ಸಮಿತಿ ಹೆಸರನ್ನು ದುರ್ಬಳಕೆ ಮಾಡಿಕೊಂಡರೆ ಅಂತಹವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಪೊಲೀಸ್ ಇಲಾಖೆಗೆ ದೂರು ನೀಡಲಾಗುವುದು ಎಂದು ಕರ್ನಾಟಕ ದಲಿತ ಸಂಘರ್ಷ ಸಮಿತಿ ರಾಜ್ಯ ಸಂಚಾಲಕ ಎಂ. ಗುರುಮೂರ್ತಿ ಪತ್ರಿಕಾ ಗೋಷ್ಠಿಯಲ್ಲಿ ಎಚ್ಚರಿಸಿದ್ದಾರೆ. ಗೋಷ್ಠಿಯಲ್ಲಿ ಪ್ರೊ. ಜಿ.ವಿ. ಚಂದ್ರಣ್ಣ, ವಿಜಯಮ್ಮ, ಮಂಜುನಾಥ್ ಕುಂದವಾಡ, ಪರಮೇಶ್ ಪುರದಾಳ್, ಬೇನಕನಹಳ್ಳಿ ಪರಮೇಶ್, ಪ್ರದೀಪ್, ದುರ್ಗಾಪ್ರಸಾದ್, ಚಂದ್ರು, ಮಹಾಂತೇಶ್ ಇತರರು ಇದ್ದರು.

# ಮಾಸ್ಕ್ ಧರಿಸದವರಿಗೆ ದಂಡ




ಹೂವಿನಹಡಗಲಿ, ಏ.24- ಪಟ್ಟಣದ ಶಾಸ್ತ್ರಿ ಸರ್ಕಲ್, ಅಂಬೇಡ್ಕರ್ ಸರ್ಕಲ್ ಬಳಿ ಇರುವ ವಿವಿಧ ಅಂಗಡಿಗಳಿಗೆ ಮಾಸ್ಕ್ ಧರಿಸದೇ ಭೇಟಿ ಕೊಟ್ಟ ಗ್ರಾಹಕರಿಗೆ ಸ್ಥಳೀಯ ಪೊಲೀಸರು ದಂಡ ವಿಧಿಸಿ ಜಾಗೃತಿ ಮೂಡಿಸಿದ್ದಾರೆ. 50 ಜನರ ವಿರುದ್ಧ ಪ್ರಕರಣ ದಾಖಲಿಸಿದ್ದು, ಇವರಿಂದ 5,000 ರೂ.ಗಳನ್ನು ವಸೂಲಿ ಮಾಡಲಾಗಿದೆ. ಸಿಪಿಐ ರಾಮರೆಡ್ಡಿ, ಪೇದೆಗಳಾದ ಕನ್ನೆಳ್ಳಿ ನಾಗರಾಜ್, ಹಣ್ಣೆ ನಾಗರಾಜ್, ಎಎಸ್‌ಐ ಒಡಕಪ್ಪ ಅವರುಗಳು ಪಾಲ್ಗೊಂಡಿದ್ದರು.

ಇದೇ ಗ್ರಾಹಕರು ಮತ್ತೊಮ್ಮೆ ಮಾಸ್ಕ್ ಧರಿಸದೇ ಅಂಗಡಿಗಳಿಗೆ ಭೇಟಿ ಕೊಟ್ಟರೆ ದುಪ್ಪಟ್ಟು ದಂಡ ವಿಧಿಸಲಾಗುವುದು ಎಂದು ಎಚ್ಚರಿಸಲಾಯಿತು.

# ಕಸಾಪ ಚುನಾವಣೆ: ಬಂಡಾಯ ಸಾಹಿತ್ಯ ಸಂಘಟನೆ ಯಾರನ್ನು ಬೆಂಬಲಿಸುವುದಿಲ್ಲ



ಬೆಂಗಳೂರು, ಏ.24 - ಕನ್ನಡ ಸಾಹಿತ್ಯ ಪರಿಷತ್ತಿನ ಚುನಾವಣೆ ಹಿನ್ನೆಲೆಯಲ್ಲಿ ಒಂದು ಸೈದ್ಧಾಂತಿಕ ಸಂಘಟನೆಯಾಗಿ ಬಂಡಾಯ ಸಾಹಿತ್ಯ ಸಂಘಟನೆ ಯಾರನ್ನೂ ಬೆಂಬಲಿಸುವುದಿಲ್ಲ ಅಥವಾ ಯಾವ ಅಭ್ಯರ್ಥಿಯನ್ನು ವಿರೋಧಿಸುವುದಿಲ್ಲ. ಸೂಕ್ತ ನಿಲುವನ್ನು ವೈಯಕ್ತಿಕವಾಗಿ ತೆಗೆದುಕೊಳ್ಳುವ ಸ್ವಾತಂತ್ರ್ಯ ಸಂಘಟನೆಯ ಎಲ್ಲರಿಗೂ ಇದೆ. ಅದು ಅವರವರಿಗೆ ಬಿಟ್ಟ ವಿಷಯವಾಗಿದೆ ಎಂದು ಬಂಡಾಯ ಸಾಹಿತ್ಯ ಸಂಘಟನೆಯ ನಾಡೋಜ ಪ್ರೊ. ಬರಗೂರು ರಾಮಚಂದ್ರಪ್ಪ ತಿಳಿಸಿದ್ದಾರೆ.

# ಬಕ್ಕೇಶ್ವರ ಮಹಾಸ್ವಾಮಿಗೆ ರುದ್ರಾಭಿಷೇಕ




ದಾವಣಗೆರೆ, ಏ.24 - ದೇಶದಲ್ಲಿ ವ್ಯಾಪಕವಾಗಿ ಹರಡುತ್ತಿರುವ ಕೊರೊನಾ ವೈರಸ್ ನಿರ್ಮೂಲನೆಗಾಗಿ ಅಖಿಲ ಭಾರತ ವೀರಶೈವ ಮಹಾಸಭಾದ ಜಿಲ್ಲಾ ಘಟಕದ ಅಧ್ಯಕ್ಷ ದೇವರಮನಿ ಶಿವಕುಮಾರ್ ನೇತೃತ್ವದಲ್ಲಿ ಶ್ರೀ ಗುರು ಶಿವಯೋಗಿ ಬಕ್ಕೇಶ್ವರ ಸ್ವಾಮಿಗೆ ರುದ್ರಾಭಿಷೇಕ ಮಾಡಿಸಿ ಪ್ರಾರ್ಥನೆ ಮಾಡಿ ಪ್ರಸಾದ ಹಂಚಲಾಯಿತು.

ಈ ಸಂದರ್ಭದಲ್ಲಿ ಮಹಾನಗರ ಪಾಲಿಕೆ ಸದಸ್ಯರಾದ ಶಿವನಗೌಡ ಟಿ. ಪಾಟೀಲ್, ಸೋಗಿ ಶಾಂತಕುಮಾರ್, ಶ್ರೀಧರ ಪಾಟೀಲ್, ಶ್ರೀಕಾಂತ್ ನೀಲಗುಂದ, ಟಿಂಕರ್ ಮಂಜಣ್ಣ, ಜಯಪ್ರಕಾಶ್ ಮಾಗಿ, ಕರಿಶಿವಪ್ಪರ ಸಿದ್ದೇಶ್, ದೇವೇಂದ್ರಪ್ಪ, ಶಿವಾನಂದ ಬೆನ್ನೂರು, ನಾಗರಾಜ್ ಅಂಗಡಿ, ಅಭಿಷೇಕ ಪಿ.ಎಳೆಹೊಳೆ, ಗುರು ಸೋಗಿ, ಗುಡಿಹಳ್ಳಿ ಬಸವರಾಜ್, ಅಣಜಿ ಪ್ರಶಾಂತ್, ಮಹಿಳಾ ಘಟಕದ ಶೋಭಾ ಕೊಟ್ರೇಶ್, ಪುಷ್ಪ ವಾಲಿ, ದ್ರಾಕ್ಷಾಯಣಿ ಅಂದಾನಪ್ಪ, ಮಂಜುಳಾ ಕೆ.ಇ., ರತ್ನ ಸದಾಶಿವ ಮತ್ತಿತರರು ಪಾಲ್ಗೊಂಡಿದ್ದರು.

# ಸುಪ್ರೀಂ : ಮುಖ್ಯ ನ್ಯಾಯಮೂರ್ತಿಯಾಗಿ ರಮಣ ಪ್ರಮಾಣ ವಚನ

ನವದೆಹಲಿ, ಏ. 24 - ಸುಪ್ರೀಂ ಕೋರ್ಟ್‌ನ 48ನೇ ಮುಖ್ಯ ನ್ಯಾಯಮೂರ್ತಿಯಾಗಿ ಎನ್.ವಿ. ರಮಣ ಅವರಿಗೆ ರಾಷ್ಟ್ರಪತಿ ರಾಮನಾಥ ಕೋವಿಂದ್ ಪ್ರಮಾಣ ವಚನ ಬೋಧಿಸಿದ್ದಾರೆ.

ರಾಷ್ಟ್ರಪತಿ ಭವನದಲ್ಲಿ ನಡೆದ ಸರಳ ಸಮಾರಂಭದಲ್ಲಿ ಪ್ರಮಾಣ ವಚನ ಬೋಧಿಸಲಾಗಿದೆ. ಈ ಸಂದರ್ಭದಲ್ಲಿ ಉಪ ರಾಷ್ಟ್ರಪತಿ ಎಂ. ವೆಂಕಯ್ಯ ನಾಯ್ಡು, ಪ್ರಧಾನ ಮಂತ್ರಿ ನರೇಂದ್ರ ಮೋದಿ ಹಾಗೂ ಕಾನೂನು ಸಚಿವ ರವಿ ಶಂಕರ್ ಪ್ರಸಾದ್ ಮತ್ತಿತರರು ಉಪಸ್ಥಿತರಿದ್ದರು.

ಆಗಸ್ಟ್ 26, 2022ರವರೆಗೆ ಅವರು ಅಧಿಕಾರದಲ್ಲಿರುತ್ತಾರೆ.

# ಸ್ಥಾಯಿ ಸಮಿತಿ ಅಧ್ಯಕ್ಷ ಗೋಣೆಪ್ಪಗೆ ಸನ್ಮಾನ



ದಾವಣಗೆರೆ,ಏ.24- ಜಿಲ್ಲಾ ಮಾದಿಗ ದಂಡೋರ ಸಮಿತಿ ವತಿಯಿಂದ ನಗರದ ರೋಟರಿ ಬಾಲಭನದಲ್ಲಿ ನಿನ್ನೆ ನಡೆದ ಜಾಗೃತಿ ಕಾರ್ಯಕ್ರಮದಲ್ಲಿ ನಗರ ಪಾಲಿಕೆಯ ಆರೋಗ್ಯ ಸ್ಥಾಯಿ ಸಮಿತಿ ಅಧ್ಯಕ್ಷ ಎಲ್.ಡಿ. ಗೋಣೆಪ್ಪ ಅವರನ್ನು ಸನ್ಮಾನಿಸಲಾಯಿತು. ಮಾದಿಗ ದಂಡೋರ ಸಮಿತಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಕೆ.ಬಿ.ನರಸಿಂಹ, ಜಿಲ್ಲಾಧ್ಯಕ್ಷ ಹೆಚ್.ಸಿ. ಗುಡ್ಡಪ್ಪ ಮತ್ತಿತರರು ಗೋಣಪ್ಪ ಅವರನ್ನು ಸನ್ಮಾನಿಸಿ, ಗೌರವಿಸಿದರು.

# ಒಳಚರಂಡಿ ವ್ಯವಸ್ಥೆ ಪಡೆದುಕೊಳ್ಳಿ ಇಲ್ಲದಿದ್ದರೆ 500 ರೂ. ದಂಡ

**ಹರಿಹರ**

ಹರಿಹರ, ಏ.24- ಹರಿಹರ ನಗರದ ಜನತೆಗೆ ಉತ್ತಮ ಗುಣಮಟ್ಟದ ಜೀವನ ನಡೆಸಲು ಒಳಚರಂಡಿ ಪೈಪ್‌ಲೈನ್‌ಗಳನ್ನು ತಮ್ಮ ಮನೆಯ ಹತ್ತಿರದವರೆಗೆ ಅಳವಡಿಸಲಾಗಿದ್ದು, ಅವುಗಳಿಗೆ ಒಳಚರಂಡಿ ಸಂಪರ್ಕ ಪಡೆದುಕೊಳ್ಳಬೇಕಿದೆ.

ಕೆಯುಐಡಿಎಫ್‌ಸಿ-ಕೆಐಯುಡಬ್ಲ್ಯುಎಂಐಪಿ-ಪಿ.ಐ.ಯು ವತಿಯಿಂದ ನಗರಸಭೆ ವ್ಯಾಪ್ತಿಯಲ್ಲಿ ಕೈಗೊಳ್ಳಲಾಗಿರುವ ಜಲಸಿರಿ ಯೋಜನೆಯಡಿ ಒಳಚರಂಡಿ ಪೈಪ್‌ಲೈನ್, ಮ್ಯಾನ್‌ಹೋಲ್ ಹಾಗೂ ಸಂಸ್ಕರಣಾ ಘಟಕಗಳ ಕಾಮಗಾರಿಯು ಮುಕ್ತಾಯ ಹಂತದಲ್ಲಿದ್ದು, ಅನುಷ್ಠಾನದ ಹಂತದಲ್ಲಿ ಮ್ಯಾನ್‌ಹೋಲ್‌ಗಳಿಂದ ರಸ್ತೆಯ ಬದಿಯವರೆಗೆ ಪೈಪ್‌ಲೈನ್ ಜೋಡಣೆ ಮಾಡಿದ್ದು ಇರುತ್ತದೆ.

ಈ ಯೋಜನೆಯ ಉದ್ದೇಶವು ಹರಿಹರ ನಗರದ ಜನತೆಗೆ ಉತ್ತಮ ಗುಣಮಟ್ಟದ ಜೀವನವನ್ನು ನಡೆಸುವ ಅವಕಾಶ ಕಲ್ಪಿಸುವುದಾಗಿದ್ದು, ಮನೆಗಳಿಗೆ ಒಳಚರಂಡಿ ವ್ಯವಸ್ಥೆಯ ಸಂಪರ್ಕವನ್ನು ಕಲ್ಪಿಸಲು ಈ ಯೋಜನೆಯನ್ನು ಸಿದ್ದಪಡಿಸಲಾಗಿದೆ. 2018 ರ ಆಗಸ್ಟ್ 29 ರಂದು ಗೃಹಬಳಕೆಗೆ ರೂ.3 ಸಾವಿರಗಳನ್ನು ವಸೂಲು ಮಾಡಲು ಸಭೆಯಲ್ಲಿ ಈಗಾಗಲೇ ತೀರ್ಮಾನಿಸಲಾಗಿರುತ್ತದೆ. ಅದರಂತೆ ಸಾರ್ವಜನಿಕರು ಒಳಚರಂಡಿ ಸಂಪರ್ಕ ಪಡೆಯಲು ರೂ.3000 ಗಳನ್ನು ನಗರಸಭೆ ಕಾರ್ಯಾಲಯದಲ್ಲಿ ಪಾವತಿಸಿ, ನಗರಸಭೆಯಿಂದ ಅನುಮತಿ ಪಡೆದ ಪ್ಲಂಬರ್‌ಗಳ ಸಹಾಯ ಪಡೆದು ತಮ್ಮ ಮನೆಯ ಸಂಪರ್ಕದ ಜೋಡಣೆಯನ್ನು ಮಾಡಿಸಿಕೊಳ್ಳಬೇಕು. ಇದೇ ದಿನಾಂಕ 30 ರೊಳಗಾಗಿ ಒಳಚರಂಡಿ ಸಂಪರ್ಕವನ್ನು ಮಾಡಿಕೊಳ್ಳಬೇಕು. ತಪ್ಪಿದಲ್ಲಿ ಅಂತಹವರ ಮೇಲೆ ಪ್ರತಿ ತಿಂಗಳು ರೂ.500 ದಂಡ ಹಾಕಲಾಗುವುದು ಎಂದು ತಿಳಿಸಿದರು.

ಹಣ ತುಂಬಿ ಸಂಪರ್ಕ ಪಡೆದುಕೊಳ್ಳಲು ಅಬ್ದುಲ್ ಕಲೀಲ್ ಮೊಬೈಲ್ ಸಂಖ್ಯೆ: 9844548231, ಯೋಗೇಶ್ವರ 8296379261 ಅವರನ್ನು ಸಂಪರ್ಕಿಸಬಹುದು. ಯಾವುದೇ ಯೋಜನೆ ಯಶಸ್ವಿಯಾಗಬೇಕಾದರೆ ಸಾರ್ವಜನಿಕರ ಸಹಭಾಗಿತ್ವ ಅತ್ಯಾವಶ್ಯಕವಾಗಿದ್ದು, ನಗರವನ್ನು ಮಾಲಿನ್ಯರಹಿತ ಸಮಾಜವನ್ನಾಗಿ ಪರಿವರ್ತಿಸಲು ಸಾರ್ವಜನಿಕರು ಕೈ ಜೋಡಿಸಬೇಕು ಎಂದು ನಗರಸಭೆ ಪೌರಾಯುಕ್ತರು ಕೋರಿದ್ದಾರೆ.

# ಬಾಲ್ಯ ವಿವಾಹಕ್ಕೆ ತಡೆ

ದಾವಣಗೆರೆ, ಏ.24- ಚಿತ್ರದುರ್ಗ ಜಿಲ್ಲೆ ಸಿರಿಗೆರೆ ಸಮೀಪ ಗ್ರಾಮದ ಯುವಕನೊಂದಿಗೆ ಅಪ್ರಾಪ್ತೆಯ ವಿವಾಹಕ್ಕೆ ಸಿದ್ಧತೆ ನಡೆಸಿದ್ದ ಬಗ್ಗೆ ದೊರೆತ ಮಾಹಿತಿ ಆಧರಿಸಿ ಬಾಲ್ಯ ವಿವಾಹವನ್ನು ತಡೆಯುವಲ್ಲಿ ಮಕ್ಕಳ ಸಹಾಯವಾಣಿ ಕೊಲ್ಯಾಬ್ ಡಾನ್ ಬಾಸ್ಕೋ ತಂಡ ಯಶಸ್ವಿಯಾಗಿದೆ. ಜಗಳೂರು ತಾಲ್ಲೂಕಿನ ಬಿಳಿಚೋಡು ಪೊಲೀಸ್ ಠಾಣೆ ವ್ಯಾಪ್ತಿಯ ಗ್ರಾಮವೊಂದರಲ್ಲಿ ಅಪ್ರಾಪ್ತೆಯ ವಿವಾಹವನ್ನು ಚಿತ್ರದುರ್ಗ ಜಿಲ್ಲೆ ಸಿರಿಗೆರೆ ಸಮೀಪದ ಗ್ರಾಮವೊಂದರ 28 ವರ್ಷದ ಯುವಕನೊಂದಿಗೆ ನಾಳೆ ದಿನಾಂಕ 25ರಂದು ನಡೆಸಲು ಎಲ್ಲಾ ಸಿದ್ಧತೆ ನಡೆದಿತ್ತು.

ಈ ಬಗ್ಗೆ ಮಕ್ಕಳ ಸಹಾಯವಾಣಿಗೆ ದೂರು ಬಂದ ಹಿನ್ನೆಲೆಯಲ್ಲಿ ಮಕ್ಕಳ ಸಹಾಯವಾಣಿ ಕೊಲ್ಯಾಬ್ ಡಾನ್ ಬಾಸ್ಕೋ ತಂಡದ ಸಂಯೋಜಕ ಟಿ.ಎಂ.ಕೊಟ್ರೇಶ್, ಮಕ್ಕಳ ಸಹಾಯವಾಣಿ ಕಾರ್ಯಕರ್ತರಾದ ಟಿ.ನಾಗರಾಜ, ಕ್ರೀಂ ಯೋಜನೆ ಕಾರ್ಯಕರ್ತ ಬಿ. ಶ್ರೀನಿವಾಸ, ಶಿಶು ಅಭಿವೃದ್ಧಿ ಯೋಜನೆ ಮಹಿಳಾ ಮೇಲ್ವಿಚಾರಕಿ ಎಚ್.ವಿ. ಶಾಂತಮ್ಮ, ಬಿಳಿಚೋಡು ಠಾಣೆ ಎಎಸ್‌ಐ ಎಂ.ಟಿ. ಸ್ವಾಮಿ ಅವರನ್ನು ಒಳಗೊಂಡ ತಂಡವು ಅಪ್ರಾಪ್ತೆಯ ಮನೆಗೆ ಹೋಗಿ ಬಾಲಕಿಯ ತಂದೆ, ತಾಯಿ, ಸಂಬಂಧಿಗಳನ್ನು ಭೇಟಿ ಮಾಡಿ, ಶಾಲಾ ದಾಖಲಾತಿ ಸಂಗ್ರಹಿಸಿ, ಪರಿಶೀಲಿಸಿದಾಗ ಬಾಲಕಿಯ ವಯಸ್ಸು 14 ವರ್ಷ 10 ತಿಂಗಳು ಎಂಬುದು ದೃಢಪಟ್ಟಿತು.

ಬಾಲ್ಯವಿವಾಹ ನಿಷೇಧ ಕಾಯ್ದೆ ಪ್ರಕಾರ ಬಾಲ್ಯವಿವಾಹ ಮಾಡಿದರೆ ಪಾಲಕರು, ಮದುವೆಯಲ್ಲಿ ಭಾಗಿಯಾದವರು, ಶಾಮಿಯಾನ ವ್ಯವಸ್ಥೆ ಮಾಡಿದವರು, ಫೋಟೋಗ್ರಾಫರ್, ಸಾಕ್ಷಿಯಾದ ಪುರೋಹಿತರಿಗೆ ಒಂದು ವರ್ಷಕ್ಕೆ ಕಡಿಮೆ ಇಲ್ಲದಂತೆ 2 ವರ್ಷಕ್ಕೆ ವಿಸ್ತರಿಸಬಹುದಾದ ಜೈಲು ಶಿಕ್ಷೆ ಅಥವಾ 1 ಲಕ್ಷ ದಂಡ ಅಥವಾ ಎರಡನ್ನೂ ವಿಧಿಸಬಹುದು ಎಂಬುದಾಗಿ ತಂಡವು ಎಚ್ಚರಿಸಿ, ಕಾನೂನು ಅರಿವು ಮೂಡಿಸಿತು. ಆಗ ಬಾಲಕಿಯ ತಂದೆ ಮುಚ್ಚಳಿಕೆ ಪತ್ರಕ್ಕೆ ಸಹಿ ಹಾಕಲು ಒಪ್ಪದಿದ್ದಾಗ ಪುನಃ ಕಾನೂನು ಶಿಕ್ಷೆಯ ತೀವ್ರತೆ ಬಗ್ಗೆ ಮನವರಿಕೆ ಮಾಡಿಕೊಟ್ಟು, ಒಪ್ಪಿಸಲಾಯಿತು. ಆ ನಂತರವಷ್ಟೇ ಮುಚ್ಚಳಿಕೆ ಪತ್ರಕ್ಕೆ ಸಹಿ ಪಡೆದು ನಡೆಯಲಿದ್ದ ಬಾಲ್ಯ ವಿವಾಹ ತಡೆಯಲಾಯಿತು.

# ಜೇನುಗೂಡು ಸಮಾಜದಿಂದ ಸ್ಪರ್ಧೆ



ದಾವಣಗೆರೆ,ಏ.24-ಜೇನುಗೂಡು ಮಹಿಳಾ ಸಮಾಜದಿಂದ ಅಂಬೇಡ್ಕರ್ ಜಯಂತಿ ಅಂಗವಾಗಿ ಮಹಿಳೆಯರಿಗೆ ರಂಗೋಲಿ ಸ್ಪರ್ಧೆ ಮತ್ತು ಆಟಗಳನ್ನು ಆಡಿಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸುಜಾತ ನಾಗೇಶ್ ವಹಿಸಿದ್ದರು. ತೀರ್ಪುಗಾರರಾಗಿ ವಸಂತ ಆಗಮಿಸಿದ್ದರು. ಕಾರ್ಯದರ್ಶಿ ಮಧು ಉಮೇಶ್ ವೇದಿಕೆಯಲ್ಲಿ ಉಪಸ್ಥಿತರಿದ್ದರು. ರೂಪಾ, ರೇಖಾ ಪ್ರಾರ್ಥಿಸಿದರು. ಕೊಟ್ರಮ್ಮ ಸ್ವಾಗತಿಸಿದರು. ವಿದ್ಯಾ ವಂದಿಸಿದರು. ರಂಗೋಲಿ ಸ್ಪರ್ಧೆಯಲ್ಲಿ ಮಮತಾ ಮೊದಲನೇ ಬಹುಮಾನ, ಸೀತಾ ಎರಡನೇಯ ಬಹುಮಾನ, ಪ್ರೀತಿ ಮೂರನೇ ಬಹುಮಾನ ಪಡೆದುಕೊಂಡರು. ಆಟದಲ್ಲಿ ಸುಮಾ, ಪ್ರೀತಿ, ಸವಿತಾ, ಮಮತಾ, ಜ್ಯೋತಿ, ಮಮತಾ ಕೊಟ್ರೇಶ್ ಬಹುಮಾನ ಪಡೆದರು.

**ಕನ್ಸಲ್ಟೆನ್ಸಿ ಸರ್ವೀಸಸ್**
ನಮ್ಮ ಕಛೇರಿಯಲ್ಲಿ ಬಿಲ್ಡಿಂಗ್ ಪ್ಲ್ಯಾನ್ಸ್, ಎಸ್ಟಿಮೇಷನ್,
ಲೇಔಟ್ ಪ್ಲ್ಯಾನ್ಸ್, ಆನ್‌ಲೈನ್ ಅಪ್‌ಲೋಡ್,
ಬ್ಲೂ ಪ್ರಿಂಟ್ಸ್ ಮತ್ತು ಪ್ಲಾಟರ್ ಪ್ರಿಂಟ್ಸ್ (A4-A0 ಸೈಜ್)
Civil ಮಾಡಿಕೊಡಲಾಗುತ್ತದೆ. ಸಂಪರ್ಕಿಸಿ:
**ಶ್ರೀ ವೀರಭದ್ರೇಶ್ವರ ಕನ್ಸಲ್ಟೆನ್ಸಿ ಸರ್ವೀಸಸ್** CS
ಪಿ.ಜೆ. ಲಾಡ್ಜ್ ಎದುರು, ಎ.ವಿ.ಕೆ. ಕಾಲೇಜ್ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ.
ಮೊ. 99168 73399, 93432 77422, 99161 73399

# ಅನಧಿಕೃತ ಧಾರ್ಮಿಕ ಕಟ್ಟಡ ತೆರವಿಗೆ ಪ್ರತಿರೋಧ ಬೇಡ



ದಾವಣಗೆರೆ, ಏ. 24 - ಸಾರ್ವಜನಿಕ ಸ್ಥಳ, ರಸ್ತೆ, ಉದ್ಯಾನವನಗಳಲ್ಲಿ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ನಿರ್ಮಿಸಿರುವ ಅನಧಿಕೃತ ಧಾರ್ಮಿಕ ಕಟ್ಟಡಗಳನ್ನು ತೆರವುಗೊಳಿಸಿದ ಬಗ್ಗೆ ಆರು ವಾರದೊಳಗಾಗಿ ವರದಿಯನ್ನು ಸರ್ಕಾರದ ಮೂಲಕ ಉಚ್ಚ ನ್ಯಾಯಾಲಯಕ್ಕೆ ಸಲ್ಲಿಸಬೇಕಿದ್ದು, ಸಾರ್ವಜನಿಕರು ಅನಧಿಕೃತ ಧಾರ್ಮಿಕ ಕಟ್ಟಡಗಳ ತೆರವು ಕಾರ್ಯಾಚರಣೆಗೆ ಪ್ರತಿರೋಧ ವ್ಯಕ್ತಪಡಿಸಬಾರದಾಗಿ ಹಾಗೂ ಪ್ರತಿರೋಧ ವ್ಯಕ್ತಪಡಿಸುವ ವ್ಯಕ್ತಿಗಳಿಗೆ ಸಹಕಾರ ನೀಡಬಾರದು ಎಂದು ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ ತಿಳಿಸಿದ್ದಾರೆ.

ಸರ್ಕಾರದ ಆದೇಶದನ್ವಯ ಸಾರ್ವಜನಿಕ ಸ್ಥಳಗಳಲ್ಲಿ 2009 ರ ಸೆ. 29 ಕ್ಕೂ ಮುಂಚಿತವಾಗಿ ಅನಧಿಕೃತವಾಗಿ ನಿರ್ಮಿಸಿರುವ ಧಾರ್ಮಿಕ ಕಟ್ಟಡಗಳನ್ನು ಆ ಪ್ರದೇಶದ ಪ್ರಶಾಂತತೆಗೆ ಭಂಗವುಂಟು ಮಾಡುವುದಿಲ್ಲವೆಂದು ಖಚಿತ ಪಟ್ಟಲ್ಲಿ, ಅಂತಹ ಕಟ್ಟಡಗಳನ್ನು ಕೆಟಿಸಿಪಿ ಕಾಯ್ದೆ, ಮುನಿಸಿಪಾಲಿಟಿ ಕಾಯ್ದೆ, ಪುರಸಭೆ ಕಾಯ್ದೆ ಮತ್ತು ಇತರೆ ಸ್ಥಳೀಯ ಕಾನೂನು ಕಾಯ್ದೆಗಳಿಗೆ ವ್ಯತಿರಿಕ್ತವಾಗಿಲ್ಲದಿದ್ದಲ್ಲಿ, ಅವುಗಳನ್ನು ಉಳಿಸಿಕೊಂಡು ಕಾನೂನು ಕಾಯ್ದೆಗೊಳಪಟ್ಟಂತೆ ಅಧಿಕೃತಗೊಳಿಸಬಹುದಾಗಿರುತ್ತದೆ.

ಸಾರ್ವಜನಿಕ ರಸ್ತೆಗಳಲ್ಲಿ, ಸಾರ್ವಜನಿಕ ಉದ್ಯಾನವನಗಳಲ್ಲಿ ಹಾಗೂ ಸ್ಥಳಗಳಲ್ಲಿ ಅನಧಿಕೃತವಾಗಿ ನಿರ್ಮಿಸಲಾಗಿರುವ ಧಾರ್ಮಿಕ ಕಟ್ಟಡಗಳನ್ನು ನಿರ್ಮಿಸಿರುವುದು ಮತ್ತು ನಿರ್ಮಾಣ ಮಾಡುತ್ತಿರುವುದು ಕಂಡುಬಂದಲ್ಲಿ ಸಾರ್ವಜನಿಕರು ಈ ಕುರಿತು ಜಿಲ್ಲಾಧಿಕಾರಿಗಳಿಗೆ, ತಾಲ್ಲೂಕು ತಹಶೀಲ್ದಾರರುಗಳಿಗೆ ಮತ್ತು ಸ್ಥಳೀಯ ಸಂಸ್ಥೆಯ ಮುಖ್ಯಸ್ಥರಿಗೆ ಮಾಹಿತಿಯನ್ನು ಒದಗಿಸಬಹುದು. ಹಾಗೂ ಮಾಹಿತಿಯನ್ನು ಒದಗಿಸುವ ಸಾರ್ವಜನಿಕರ ಹೆಸರನ್ನು ಬಹಿರಂಗ ಪಡಿಸದೇ ರಹಸ್ಯವಾಗಿಡಲಾಗುವುದು.

ಕಟ್ಟಡಗಳ ತೆರವು ಕಾರ್ಯಾಚರಣೆಗೆ ಯಾರಾದರೂ ಅಡ್ಡಿಪಡಿಸಲು ಅಥವಾ ತಡೆಯೊಡ್ಡಲು ಮುಂದಾದಲ್ಲಿ ಅಂತಹ ವ್ಯಕ್ತಿಗಳ ವಿರುದ್ಧ ಕ್ರಿಮಿನಲ್ ಪ್ರಕರಣಗಳನ್ನು ದಾಖಲು ಮಾಡಲಾಗುವುದು ಎಂದವರು ಹೇಳಿದ್ದಾರೆ.

## ಲಸಿಕೆ, ಆಕ್ಸಿಜನ್ ಉಪಕರಣಗಳ ಆಮದು ಸುಂಕ ರದ್ದು

ನವದೆಹಲಿ, ಏ. 24 - ಕೊರೊನಾ ಲಸಿಕೆ, ವೈದ್ಯಕೀಯ ದರ್ಜೆಯ ಆಕ್ಸಿಜನ್ ಹಾಗೂ ಸಂಬಂಧಿಸಿದ ಉಪಕರಣಗಳ ಆಮದಿನ ಮೇಲಿನ ಸುಂಕವನ್ನು ಕೇಂದ್ರ ಸರ್ಕಾರ ರದ್ದುಗೊಳಿಸಿದೆ. ಇದರಿಂದಾಗಿ ಕೊರೊನಾ ಎದುರಿಸಲು ಅಗತ್ಯವಿರುವ ಉಪಕರಣಗಳ ಆಮದು ವೆಚ್ಚ ಕಡಿಮೆಯಾಗಲಿದೆ.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ.

ಈ ಸರಕುಗಳ ಆಮದಿನ ಮೇಲಿದ್ದ ಮೂಲ ಸುಂಕ ಹಾಗೂ ಆರೋಗ್ಯ ಸೆಸ್ ರದ್ದುಗೊಳಿಸಲಾಗಿದೆ. ಈ ವಿನಾಯಿತಿ ಮೂರು ತಿಂಗಳವರೆಗೆ ಜಾರಿಯಲ್ಲಿರಲಿದೆ ಎಂದು ಅಧಿಕೃತ ಹೇಳಿಕೆಯಲ್ಲಿ ತಿಳಿಸಲಾಗಿದೆ. ಪ್ರಸಕ್ತ ಸರ್ಕಾರ ಈ ಸರಕುಗಳ ಮೇಲೆ ಶೇ.10ರಷ್ಟು ಆಮದು ಸುಂಕ ಹೇರುತ್ತಿದೆ.

ಪ್ರಸಕ್ತ ದೇಶದಲ್ಲಿ ಕೊವಿಶೀಲ್ಡ್ ಹಾಗೂ ಕೊವ್ಯಾಕ್ಸಿನ್ ಲಸಿಕೆಗಳು ಲಭ್ಯವಾಗುತ್ತಿವೆ. ಮುಂದಿನ ದಿನಗಳಲ್ಲಿ ರಷ್ಯಾದ ಸ್ಪುಟ್ನಿಕ್ ವಿ ಲಸಿಕೆ ಲಭ್ಯವಾಗುವ ನಿರೀಕ್ಷೆ ಇದೆ. ಮೊಡೆರ್ನಾ ಹಾಗೂ ಜಾನ್ಸನ್ ಅಂಡ್ ಜಾನ್ಸನ್ ಸೇರಿದಂತೆ ಹಲವು ಕಂಪನಿಗಳ ಲಸಿಕೆಗಳೂ ತುರ್ತು ಅನುಮತಿ ಪಡೆಯುವ ಸಾಧ್ಯತೆ ಇದೆ.

## ಕೊವ್ಯಾಕ್ಸಿನ್ ಲಸಿಕೆ ಬೆಲೆ 600-1,200 ರೂ.

ನವದೆಹಲಿ ಏ. 24 – ಪ್ರತಿ ಡೋಸ್ ಕೊವ್ಯಾಕ್ಸಿನ್ ಲಸಿಕೆಯನ್ನು ಡೋಸ್‌ಗೆ 600 ರೂ.ಗಳಂತೆ ರಾಜ್ಯಗಳಿಗೆ ಪೂರೈಸುವುದಾಗಿ ಭಾರತ್ ಬಯೋಟೆಕ್ ತಿಳಿಸಿದೆ. ಹೈದರಾಬಾದ್‌ನ ಈ ಕಂಪನಿ, ಖಾಸಗಿ ಆಸ್ಪತ್ರೆಗಳಿಗೆ ಪ್ರತಿ ಡೋಸ್‌ಗೆ 1,200 ರೂ.ಗಳಂತೆ ಲಸಿಕೆ ಪೂರೈಸಲಿದೆ.

ಕೇಂದ್ರ ಸರ್ಕಾರಕ್ಕೆ ಪ್ರತಿ ಡೋಸ್‌ಗೆ 150 ರೂ.ಗಳಂತೆ ಲಸಿಕೆ ಪೂರೈಸಲಾಗುತ್ತಿದೆ. ಕೇಂದ್ರ ಸರ್ಕಾರ ಈ ಲಸಿಕೆಗಳನ್ನು ಉಚಿತವಾಗಿ ಕೊಡುತ್ತಿದೆ ಎಂದು ಭಾರತ್ ಬಯೋಟೆಕ್ ಅಧ್ಯಕ್ಷ ಹಾಗೂ ವ್ಯವಸ್ಥಾಪಕ ನಿರ್ದೇಶಕ ಕೃಷ್ಣ ಎಂ. ಇಲ್ಲ ತಿಳಿಸಿದ್ದಾರೆ.

# 2,000 ಬೆಡ್‌ಗಳ ಐ.ಸಿ.ಯು. ತಾತ್ಕಾಲಿಕ ಆಸ್ಪತ್ರೆಗಳ ಸ್ಥಾಪನೆ

ಬೆಂಗಳೂರು, ಏ. 24 - ಕೊರೊನಾ ಪ್ರಕರಣಗಳು ತೀವ್ರವಾಗಿ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ, ಬೆಂಗಳೂರು ಮತ್ತಿತರೆ ಕಡೆ ಹದಿನೈದು ದಿನಗಳಲ್ಲಿ ತಾತ್ಕಾಲಿಕ ಆಸ್ಪತ್ರೆಗಳನ್ನು ಸ್ಥಾಪಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ ಹಾಗೂ ಖಾಸಗಿ ಆಸ್ಪತ್ರೆಗಳು ಶೇ.80ರಷ್ಟು ಬೆಡ್‌ಗಳನ್ನು ಕೊರೊನಾ ರೋಗಿಗಳಿಗೆ ಮೀಸಲಿಡಬೇಕು ಎಂದು ಆದೇಶಿಸಿದೆ.

ಪತ್ರಿಕಾಗೋಷ್ಠಿಯಲ್ಲಿ ಈ ವಿಷಯ ತಿಳಿಸಿರುವ ಆರೋಗ್ಯ ಸಚಿವ ಡಾ. ಕೆ. ಸುಧಾಕರ್, 2,000 ವೆಂಟಿಲೇಟರ್ ಐ.ಸಿ.ಯು. ಹೊಂದಿರುವ ಬೆಡ್‌ಗಳ ತಾತ್ಕಾಲಿಕ ಆಸ್ಪತ್ರೆಗಳನ್ನು ಬೆಂಗಳೂರಿನಲ್ಲಿ ಸ್ಥಾಪಿಸಲು ನಿರ್ಧರಿಸಲಾಗಿದೆ ಎಂದಿದ್ದಾರೆ.

ಇದಲ್ಲದೇ, 250 ಬೆಡ್‌ಗಳ ಸಾಮರ್ಥ್ಯ ಹೊಂದಿರುವ ಮಾಡ್ಯುಲರ್ ಐ.ಸಿ.ಯು.ಗಳನ್ನು ಮೈಸೂರು, ಹುಬ್ಬಳ್ಳಿ, ಬೀದರ್, ಬೆಳಗಾವಿ ಹಾಗೂ ಶಿವಮೊಗ್ಗಗಳಲ್ಲಿ ಸ್ಥಾಪಿಸಲಾಗುವುದು ಎಂದವರು ಹೇಳಿದ್ದಾರೆ.

ಈ ಆಸ್ಪತ್ರೆಗಳನ್ನು ಹದಿನೈದು ದಿನಗಳಲ್ಲಿ ಸ್ಥಾಪಿಸಲಾಗುವುದು. ವೆಂಟಿಲೇಟರ್ ಸೇರಿದಂತೆ ಹಲವಾರು ಉಪಕರಣಗಳನ್ನು ಆಮದು ಮಾಡಿಕೊಳ್ಳಬೇಕಾಗಬಹುದು ಎಂದು ಸುಧಾಕರ್ ತಿಳಿಸಿದ್ದಾರೆ.

ಸರ್ಕಾರದ ನಿರ್ಧಾರದಿಂದಾಗಿ ಸರ್ಕಾರದ ಬಳಿ ಲಭ್ಯವಾಗಲಿರುವ ಬೆಡ್‌ಗಳ ಪ್ರಮಾಣ ಈಗಿನ ಶೇ.50ರಿಂದ 80ಕ್ಕೆ ಹೆಚ್ಚಾಗಲಿದೆ ಎಂದವರು ಹೇಳಿದ್ದಾರೆ.

ಈಗ ಕಂಡು ಬಂದಿರುವ ಕೊರೊನಾ ಅಲೆಯ ಪ್ರಮಾಣ ವೈದ್ಯಕೀಯ ಜಗತ್ತನ್ನು ಬೆಚ್ಚಿ ಬೀಳಿಸಿದೆ. ಭಾರತದಲ್ಲಿ ಹೊಸ ರೂಪಾಂತರಿ ಕೊರೊನಾ ಪ್ರಕರಣಗಳು ಹೆಚ್ಚಾಗಿವೆ. ಇತರೆ ದೇಶಗಳಲ್ಲೂ ಎರಡನೇ ಅಲೆ ಕಂಡು ಬಂದಿದೆಯಾದರೂ, ಭಾರತದಂತಹ ಅಲೆ ಬೇರೆ ದೇಶದಲ್ಲಿ ಕಂಡುಬಂದಿರಲಿಲ್ಲ ಎಂದಿದ್ದಾರೆ.

ಭಾರತದಲ್ಲಿ ಕಂಡು ಬಂದಿರುವ ಎರಡನೇ ಅಲೆಯನ್ನು ವಿದೇಶಗಳು ಭಾರತೀಯ ರೂಪಾಂತರಿ ಎಂದು ಕರೆಯುತ್ತಿದ್ದು, ಇದರ ಜಿನೋಮ್ ಸರಣಿ ರೂಪಿಸುತ್ತಿದ್ದಾರೆ ಎಂದೂ ಅವರು ತಿಳಿಸಿದ್ದಾರೆ.

ಕಳೆದ ವರ್ಷ ಆಕ್ಸಿಜನ್ ಬೇಡಿಕೆ ಇಷ್ಟೊಂದು ಇರಲಿಲ್ಲ. ಈಗ ಹಠಾತ್ತನೆ ಜನರಲ್ಲಿ ಉಸಿರು ಕಟ್ಟುವಿಕೆ ಕಂಡು ಬರುತ್ತಿದ್ದು, ಆಕ್ಸಿಜನ್ ಬೇಡಿಕೆ ಹೆಚ್ಚಾಗಿದೆ.

ಕಳೆದ ವರ್ಷ ಪ್ರಕರಣಗಳು ಅತಿ ಹೆಚ್ಚಾಗಿದ್ದಾಗಲೂ ನಾವು 300ರಿಂದ 350 ಟನ್ ಆಕ್ಸಿಜನ್ ಬಳಸಿದ್ದೆವು. ಈ ಬಾರಿ ನಾವು ಪ್ರಸಕ್ತ 500 ಟನ್ ಆಕ್ಸಿಜನ್ ಬಳುತ್ತಿದ್ದೇವೆ. ಹೀಗೆಯೇ ಮುಂದುವರೆದರೆ ಆಕ್ಸಿಜನ್ ಕೊರತೆ ಉಂಟಾಗಲಿದೆ ಎಂದು ಹೇಳಿದ್ದಾರೆ.

## ಜಾತಿ ನಿಂದನೆ, ಶುಲ್ಕ ಕಿರುಕುಳ ವಿದ್ಯಾರ್ಥಿನಿ ಆತ್ಮಹತ್ಯೆಗೆ ಯತ್ನ

ಕೊಟ್ಟೂರು, ಏ.24- ಪಟ್ಟಣದ ಕಾಲೇಜೊಂದರ ದ್ವಿತೀಯ ಪಿಯುಸಿ ವಿದ್ಯಾರ್ಥಿನಿ ಪೂಜಾ ಇಂದು ಕಾಲೇಜಿನ ಮೂರನೇ ಮಹಡಿ ಯಿಂದ ಹಾರಿದ್ದಾಳೆ. ಎರಡೂ ಕಾಲುಗಳು, ಬೆನ್ನುಮೂಳೆ ಮುರಿದಿದೆ.


ಫೀಜ್ ಕಟ್ಟಲು ಮಾನಸಿಕ ಕಿರುಕುಳ ಹಾಗೂ ಜಾತಿ ನಿಂದನೆಯಿಂದ ಖಿನ್ನತೆಗೆ ಒಳಗಾಗಿ ಆತ್ಮಹತ್ಯೆ ಮಾಡಿಕೊಳ್ಳಲು ಯತ್ನಿಸಿದ್ದಾಳೆ ಎಂದು ಹುಡುಗಿಯ ತಂದೆ ರಾಜಪ್ಪ, ಕೆ.ಹಾಲಪ್ಪ ಆರೋಪಿಸಿದ್ದಾರೆ.

ಇಲ್ಲಿನ ಪ್ರವಾಸಿ ಮಂದಿರದಲ್ಲಿ ಶುಕ್ರವಾರ ಅಖಿಲ ಕರ್ನಾಟಕ ಕುಳುವ ಮಹಾ ಸಂಘದ ಸಹಕಾರದೊಂದಿಗೆ ಸುದ್ದಿಗೋಷ್ಠಿ ನಡೆಸಿದ ರಾಜಪ್ಪ, ವಸತಿ ಹಾಗೂ ಕಾಲೇಜಿನ ಶುಲ್ಕ ಸೇರಿ 90 ಸಾವಿರ ರೂ ಕಟ್ಟಬೇಕಿತ್ತು, 50 ಸಾವಿರ ರೂ ಕಟ್ಟಿದೆ. ಉಳಿದ ಹಣವನ್ನು ಕೊರೊನಾದಿಂದ ಕಟ್ಟಲು ತಡವಾಯಿತು. ಈ ಪ್ರಕರಣ ಕುರಿತು ಕೊಟ್ಟೂರು ಪೊಲೀಸ್ ಠಾಣೆಯಲ್ಲಿ ಕಾಲೇಜಿನ ಪ್ರಾಂಶುಪಾಲ ಹಾಗೂ ವ್ಯವಸ್ಥಾಪಕರ ವಿರುದ್ಧ ಕೇಸ್ ದಾಖಲಿಸಲಾಗಿದೆ ಎಂದು ಅವರು ವಿವರಿಸಿದರು.

## ಆಕ್ಸಿಜನ್ ಕೊರತೆ : ರೋಗಿಗಳ ಸಾವು

ನವದೆಹಲಿ, ಏ. 23 - ದೇಶಾದ್ಯಂತ ಕೊರೊನಾ ಪರಿಸ್ಥಿತಿ ಉಲ್ಬಣಿಸುತ್ತಿರುವ ನಡುವೆಯೇ ದೆಹಲಿ ಜೈಪುರ ಗೋಲ್ಡನ್ ಆಸ್ಪತ್ರೆಯಲ್ಲಿ ಆಕ್ಸಿಜನ್ ಕೊರತೆಯಿಂದ 20 ರೋಗಿಗಳು ಸಾವನ್ನಪ್ಪಿದ್ದಾರೆ ಎಂಬ ವರದಿ ಬಂದಿವೆ.

# ಉತ್ಪಾದನೆ ಹೆಚ್ಚಳಕ್ಕೆ ಲಸಿಕೆ ಬೆಲೆ ಪರಿಷ್ಕರಣೆ



**ಲಸಿಕೆಯ ಹೊಸ ಬೆಲೆಗೆ ಸೆರಮ್ ಸಮರ್ಥನೆ**

ನವದೆಹಲಿ, ಏ. 24 - ದೇಶದಲ್ಲಿ ಅತಿ ಹೆಚ್ಚಿನ ಕೊರೊನಾ ಲಸಿಕೆ ಉತ್ಪಾದಿಸುವ ಸೆರಮ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ (ಎಸ್.ಐ.ಐ.) ತನ್ನ ಕೋವಿಶೀಲ್ಡ್ ಲಸಿಕೆಯ ಬೆಲೆಯನ್ನು ಸಮರ್ಥಿಸಿಕೊಂಡಿದ್ದು, ಮುಂಗಡವಾಗಿ ನೀಡಿದ್ದ ಹಣವನ್ನು ಆಧರಿಸಿ, ಆರಂಭಿಕ ಹಂತದಲ್ಲಿ ಕಡಿಮೆ ಬೆಲೆ ನಿಗದಿ ಪಡಿಸಲಾಗಿತ್ತು ಎಂದು ಹೇಳಿದೆ.

ಈಗ ಬರುವ ಹೂಡಿಕೆಯಿಂದ ಉತ್ಪಾದನೆ ಹೆಚ್ಚಿಸಲಾಗುವುದು ಹಾಗೂ ಇನ್ನಷ್ಟು ಲಸಿಕೆ ಉತ್ಪಾದಿಸುವ ಸಾಮರ್ಥ್ಯ ವಿಸ್ತರಿಸಲಾಗುವುದು ಎಂದು ಸೆರಮ್ ಹೇಳಿದೆ.

ವಿಶ್ವದ ಅತಿ ದೊಡ್ಡ ಲಸಿಕೆ ಉತ್ಪಾದಕನಾಗಿರುವ ಸೆರಮ್, ಸರ್ಕಾರಗಳಿಗೆ ಲಸಿಕೆಯನ್ನು ಪ್ರತಿ ಡೋಸ್‌ಗೆ 400 ರೂ.ಗಳಂತೆ ಹಾಗೂ ಖಾಸಗಿ ಆಸ್ಪತ್ರೆಗಳಿಗೆ 600 ರೂ.ಗಳಂತೆ ಮಾರುವುದಾಗಿ ಹೇಳಿತ್ತು.

ಈ ಮುಂಚೆ ಕೇಂದ್ರ ಸರ್ಕಾರದ ಜೊತೆ ಮಾಡಿಕೊಳ್ಳಲಾದ ಒಪ್ಪಂದದ ಅನ್ವಯ ಪ್ರತಿ ಡೋಸ್ ಲಸಿಕೆಗೆ 150 ರೂ. ಪಡೆಯಲಾಗುತ್ತಿತ್ತು.

ಲಸಿಕೆಗೆ ಭಿನ್ನ ದರ ನಿಗದಿಪಡಿಸಲಾಗುತ್ತಿದ್ದು, ಇದು ಪಕ್ಷಪಾತಿ. ಜನ ಸಾಮಾನ್ಯರು ಸಂಕಷ್ಟದಲ್ಲಿರುವಾಗ ದೊಡ್ಡ ಉದ್ಯಮಗಳಿಗೆ ಲಾಭ ಮಾಡಿಕೊಡಲಾಗುತ್ತಿದೆ ಎಂದು ಪ್ರತಿಪಕ್ಷಗಳು ಆರೋಪಿಸಿದ್ದವು.

ಈ ಹಿನ್ನೆಲೆಯಲ್ಲಿ ಸ್ಪಷ್ಟನೆ ನೀಡಿರುವ ಸೆರಮ್, ಜಾಗತಿಕ ಲಸಿಕೆ ಬೆಲೆ ಹಾಗೂ ದೇಶದಲ್ಲಿರುವ ಬೆಲೆಗಳಿಗೆ ಹೋಲಿಕೆ ಮಾಡುವುದು ಸೂಕ್ತವಲ್ಲ. ಕೋವಿಶೀಲ್ಡ್ ಪ್ರಸಕ್ತ ಮಾರುಕಟ್ಟೆಯಲ್ಲಿ ಲಭ್ಯವಿರುವ ಅತಿ ಕಡಿಮೆ ಬೆಲೆಯ ಲಸಿಕೆ ಎಂದು ಹೇಳಿದೆ.

ಆರಂಭಿಕ ಹಂತದಲ್ಲಿ ಸರ್ಕಾರ ದೊಡ್ಡ ಪ್ರಮಾಣದಲ್ಲಿ ಲಸಿಕೆ ಖರೀದಿಸಿತ್ತು. ಈ ಹಂತದಲ್ಲಿ ಬೇರೆ ದೇಶಗಳೂ ಸರ್ಕಾರಗಳ ಮೂಲಕ ಲಸಿಕೆ ಖರೀದಿ ಮಾಡಿದ್ದವು ಎಂದು ಕಂಪನಿ ಹೇಳಿದೆ.

ಲಸಿಕೆಯಲ್ಲಿ ಸುಸ್ಥಿರತೆ ಬೇಕಿದೆ. ಪ್ರಸಕ್ತ ಸ್ಥಿತಿ ಅತ್ಯಂತ ಗಂಭೀರವಾಗಿದ್ದು, ವೈರಸ್ ನಿರಂತರವಾಗಿ ಮ್ಯುಟೇಟ್ ಆಗುತ್ತಿದೆ. ಈ ಹಿನ್ನೆಲೆಯಲ್ಲಿ ಲಸಿಕೆ ಸಾಮರ್ಥ್ಯ ಹೆಚ್ಚಿಸುವ ಮೂಲಕ ಜೀವ ರಕ್ಷಿಸಲು ಹೂಡಿಕೆ ಹೆಚ್ಚಿಸಬೇಕಿದೆ ಹಾಗೂ ಸಾಮರ್ಥ್ಯ ವೃದ್ಧಿಸಬೇಕಿದೆ ಎಂದು ಸೆರಮ್ ತಿಳಿಸಿದೆ.

ಖಾಸಗಿ ಆಸ್ಪತ್ರೆಗಳಿಗೆ ಸೀಮಿತ ಪ್ರಮಾಣದಲ್ಲಿ ಮಾತ್ರ 600 ರೂ.ಗಳಂತೆ ಲಸಿಕೆ ಮಾರಲಾಗುವುದು. ಕೊರೊನಾ ಚಿಕಿತ್ಸೆಗೆ ಅಗತ್ಯವಾಗುವ ಇತರೆ ಚಿಕಿತ್ಸಾ ವೆಚ್ಚಕ್ಕೆ ಹೋಲಿಸಿದರೆ ಇದು ತೀರಾ ಕಡಿಮೆ ಎಂದು ಕಂಪನಿ ಹೇಳಿದೆ.

## ವಾರಾಂತ್ಯದ ಲಾಕ್‌ಡೌನ್‌ಗೆ ಸ್ಪಂದನೆ



**ಹರಿಹರ**

ಹರಿಹರ, ಏ.24- ದಿನೇ ದಿನೇ ಹೆಚ್ಚುತ್ತಿರುವ ಕೊರೊನಾ ರೋಗ ತಡೆಗೆ ಸರ್ಕಾರ ವಾರಾಂತ್ಯದ ಲಾಕ್‌ಡೌನ್ ಘೋಷಣೆ ಮಾಡಿದ್ದು, ನಗರದ ವ್ಯಾಪಾರಸ್ಥರು ಹಾಗೂ ಸಾರ್ವಜನಿಕರು ಸ್ವಯಂ ಪ್ರೇರಿತರಾಗಿ ಲಾಕ್‌ಡೌನ್‌ಗೆ ಸಂಪೂರ್ಣ ಬೆಂಬಲ ನೀಡಿದರು.

ಸರ್ಕಾರ ಶನಿವಾರ ಮತ್ತು ಭಾನುವಾರ ಲಾಕ್ ಡೌನ್ ಘೋಷಣೆ ಮಾಡಿದ್ದರಿಂದಾಗಿ ನಗರದಲ್ಲಿ ಬೆಳಗ್ಗೆಯಿಂದ ಔಷಧಿ ಅಂಗಡಿ ಬಿಟ್ಟರೆ ಯಾವುದೇ ರೀತಿಯ ಅಂಗಡಿ ಮುಂಗಟ್ಟುಗಳು ತೆರೆದಿರಲಿಲ್ಲ. ಅಲ್ಲೊಂದು, ಇಲ್ಲೊಂದು ಬಸ್ ಸಂಚಾರವಿದ್ದು ಟ್ಯಾಕ್ಸಿ, ಆಟೋ, ಗೂಡ್ಸ್ ವಾಹನಗಳು ಕೂಡ ರಸ್ತೆಗೆ ಇಳಿಯದೆ ಬಂದ್‌ಗೆ ಸಹಕಾರ ನೀಡಿದವು. ಸಾರ್ವಜನಿಕರು ಸಹ ಹೆಚ್ಚಾಗಿ ಓಡಾಡುವುದು ಎಲ್ಲಿಯೂ ಕಂಡು ಬಂದಿರುವುದಿಲ್ಲ. ಮನೆಯಿಂದ ಹೊರಗಡೆ ಬರದೆ ಮನೆಯಲ್ಲೇ ಇದ್ದು ಸ್ವಯಂ ಪ್ರೇರಿತರಾಗಿ ಲಾಕ್‌ಡೌನ್‌ಗೆ ಬೆಂಬಲ ನೀಡಿದರು.

ಬೆಳಗ್ಗೆಯಿಂದಲೇ ತಹಶೀಲ್ದಾರ್ ಕೆ.ಬಿ.ರಾಮಚಂದ್ರಪ್ಪ, ಪೌರಾಯುಕ್ತೆ ಎಸ್. ಲಕ್ಷ್ಮಿ, ಸಿಪಿಐ ಸತೀಶ್ ಕುಮಾರ್, ಪಿಎಸ್‌ಐ ಬಸವರಾಜ್ ತೆಲಿ ನಗರದಲ್ಲಿ ಅಲ್ಲೊಂದು, ಇಲ್ಲೊಂದು ತೆರೆದಿದ್ದ ಅಂಗಡಿ ಮುಂಗಟ್ಟುಗಳನ್ನು ಬಂದ್ ಮಾಡಿಸಲು ಮುಂದಾಗಿದ್ದರು.

# ಅಸ್ವಸ್ಥ ಕರಡಿಯನ್ನು ರಕ್ಷಿಸಿದ ಗ್ರಾಮಸ್ಥರು



ಕೂಡ್ಲಿಗಿ, ಏ.24- ತಾಲ್ಲೂಕಿನ ಕರಡಿಹಳ್ಳಿ ಹೊರವಲಯದಲ್ಲಿ ಕರಡಿಯೊಂದು ತೀರಾ ಅಸ್ವಸ್ಥತೆಯಿಂದ ಬಳಲಿ ಬಿದ್ದಿರುವ ರೀತಿಯಲ್ಲಿ ಪತ್ತೆಯಾಗಿದೆ.

ಗ್ರಾಮದ ಹೊರವಲಯದ ತೋಪೊಂದರಲ್ಲಿ ಎಚ್ಚರವಿಲ್ಲದ ಸ್ಥಿತಿಯಲ್ಲಿ ಕರಡಿ ಕಂಡುಬಂದಿದ್ದು. ಗ್ರಾಮದ ಮುಖಂಡ ಮಾಳ್ಗಿ ಕೃಷ್ಣಪ್ಪ, ನಾಗರಾಜ ನೇತೃತ್ವದಲ್ಲಿ ಗ್ರಾಮಸ್ಥರು ಸಮಯ ಪ್ರಜ್ಞೆ ಮೆರೆದು ಕರಡಿಗೆ ಪ್ರಥಮ ಚಿಕಿತ್ಸೆ ನೀಡಿ ಸಂರಕ್ಷಿಸಿದ್ದಾರೆ.

ನಂತರ ಅರಣ್ಯ ಇಲಾಖೆ ಅಧಿಕಾರಿಗಳನ್ನು ಸಂಪರ್ಕಿಸಿ ಕರಡಿಯನ್ನು ಒಪ್ಪಿಸಿದ್ದಾರೆ. ಕೆಲ ಗ್ರಾಮಸ್ಥರೇ ಹೇಳುವಂತೆ ಕರಡಿ, ಕರಡಿಹಳ್ಳಿ ಹಾಗೂ ಸುತ್ತ ಮುತ್ತಲ ಗ್ರಾಮಗಳಲ್ಲಿ ಬಹುದಿನಗಳಿಂದ ಕಾಣಿಸಿಕೊಂಡು ಆತಂಕ ಸೃಷ್ಠಿಸಿತ್ತು. ಈ ಹಿನ್ನೆಲೆಯಲ್ಲಿ ಕಿಡಿಗೇಡಿಗಳು ಕರಡಿಗೆ ಜೀವಕ್ಕೆ ಕುತ್ತು ತರುವ ನಿಟ್ಟಿ ನಲ್ಲಿ ವಿಷಪೂರಿತ ಆಹಾರ ಇಟ್ಟಿರ ಬಹುದು ಎಂದು ಊಹಿಸಲಾಗಿದೆ.

ಕರಡಿಗೆ ಅಗತ್ಯ ಚಿಕಿತ್ಸೆ ನೀಡಿದ್ದು, ಇದೀಗ ಸಹಜ ಸ್ಥಿತಿಗೆ ಮರಳಿದೆ ಎಂದು ಅರಣ್ಯ ಇಲಾಖೆ ಸಿಬ್ಬಂದಿ ಸ್ಪಷ್ಟಪಡಿಸಿದ್ದಾರೆ. ಗ್ರಾಮದ ಮಾಳ್ಗಿ ಕೃಷ್ಣಪ್ಪ ಹಾಗೂ ಯುವಕರ ತಂಡದ ವನ್ಯ ಮೃಗ ಪ್ರೀತಿಯನ್ನು ಕಂಡು ಅರಣ್ಯ ಇಲಾಖೆ ಶಹಬ್ಬಾಸ್ ಗಿರಿ ನೀಡಿದೆ. ಪ್ರಸ್ತುತ ಕರಡಿ ದರೋಜಿ ಕರಡಿ ಧಾಮದಲ್ಲಿ ಆರೋಗ್ಯವಾಗಿದೆ.

## ಎಂಸಿಸಿ 'ಎ' ಬ್ಲಾಕ್‌ನ ಶಿರಡಿ ಸಾಯಿ ಮಂದಿರದಲ್ಲಿ ದರ್ಶನವಿಲ್ಲ



ದಾವಣಗೆರೆ, ಏ. 24 - ಕೊರೊನಾ ಸೋಂಕಿನ ಹಿನ್ನೆಲೆಯಲ್ಲಿ ಸರ್ಕಾರದ ಆದೇಶದಂತೆ ನಗರದ ಎಂಸಿಸಿ 'ಎ' ಬ್ಲಾಕ್‌ನಲ್ಲಿರುವ ಶ್ರೀ ಶಿರಡಿ ಸಾಯಿಬಾಬಾ ಮಂದಿರದಲ್ಲಿ ಬರುವ ಮೇ 5 ರವರೆಗೆ ಗುರುಗಳಿಂದ ಪೂಜೆ ನಡೆಯುತ್ತದೆ. ಆದರೆ ಭಕ್ತಾದಿಗಳಿಗೆ ದರ್ಶನಕ್ಕೆ ಅವಕಾಶವಿರುವುದಿಲ್ಲ ಎಂದು ಶ್ರೀ ಸಾಯಿ ಟ್ರಸ್ಟ್ ಕಾರ್ಯದರ್ಶಿ ಎಂ. ಶಿವಪ್ಪ ತಿಳಿಸಿದ್ದಾರೆ.

# ವೀಕೆಂಡ್ ಕರ್ಫ್ಯೂಗೆ ಉತ್ತಮ ಸ್ಪಂದನೆ




ಹರಪನಹಳ್ಳಿ, ಏ.24- ಕೋವಿಡ್ ಸೋಂಕು ದಿನದಿಂದ ದಿನಕ್ಕೆ ವ್ಯಾಪಕವಾಗಿ ಹರಡುತ್ತಿದ್ದು, ಕಣ್ಣಿಗೆ ಕಾಣದ ಕಿಲ್ಲರ್ ಕೊರೊನಾವನ್ನು ತಡೆಗಟ್ಟಲು ಸರ್ಕಾರ ಸೆಮಿ ಲಾಕ್‌ಡೌನ್ ಮಾಡಿದ್ದು, ತಾಲ್ಲೂಕಿನ ಜನರು ಹಾಗೂ ವ್ಯಾಪಾರಸ್ಥರು ಪೊಲೀಸ್ ಅಧಿಕಾರಿಗಳ ಮಾತಿಗೆ ಸ್ಪಂದಿಸಿದ್ದಾರೆ. ಬೆಳಗಿನಿಂದ ಅಗತ್ಯ ಸೇವೆಗಳನ್ನು ಹೊರತು ಪಡಿಸಿ ಎಲ್ಲಾ ಅಂಗಡಿ ಮುಂಗಟ್ಟುಗಳಿಗೆ ಬೀಗ ಹಾಕಿದ್ದು, ಅಲ್ಲೊಂದು ಇಲ್ಲೊಂದು ವಾಹನಗಳು ರಸ್ತೆಗಿಳಿದಿರುವುದು ಬಿಟ್ಟರೆ ಇಡೀ ಪಟ್ಟಣ ಬಿಕೋ ಎನ್ನುತ್ತಿತ್ತು.

ಸರ್ಕಾರ ಕೊರೊನಾ ತಡೆಗಟ್ಟಲು ತೆಗೆದುಕೊಳ್ಳುತ್ತಿರುವ ಪ್ರತಿಯೊಂದು ಕಟ್ಟುನಿಟ್ಟಿನ ಕ್ರಮಗಳಿಗೆ ಜನರು ಸಹಕರಿಸುತ್ತಿದ್ದಾರೆ. ವಾರಾಂತ್ಯದ ಕರ್ಫ್ಯೂ ಬಗ್ಗೆ ಕಳೆದೆರಡು ದಿನಗಳಿಂದ ಪೊಲೀಸ್ ಇಲಾಖೆ, ಪುರಸಭೆ ಹಾಗೂ ತಾಲ್ಲೂಕು ಆಡಳಿತ ಸಾಕಷ್ಟು ಜಾಗೃತಿ ಮೂಡಿಸಿದ್ದು, ಜನರು ಮನೆಯಲ್ಲಿಯೇ ಉಳಿಯುವಂತಾಗಿದ್ದಾರೆ.

ಪಟ್ಟಣದ ಪ್ರಮುಖ ರಸ್ತೆಗಳಿಗೆ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿಯವರು ರಸ್ತೆಗೆ ಬ್ಯಾರಿಕೇಡ್ ಹಾಕಿ ಅನಾವಶ್ಯಕವಾಗಿ ಸಂಚರಿಸುವ ವಾಹನ ಸವಾರರಿಗೆ ಬುದ್ಧಿವಾದ ಹೇಳಿ ಕಳಿಸಿದ ಘಟನೆ ಪಟ್ಟಣದ ಪ್ರಮುಖ ವೃತ್ತಗಳಲ್ಲಿ ನಡೆದಿದೆ.

ತಾಲ್ಲೂಕಿನ ಗ್ರಾಮೀಣ ಪ್ರದೇಶಗಳ ಸಾರ್ವಜನಿಕರು ಪೊಲೀಸ್ ಸಿಬ್ಬಂದಿಗಳನ್ನು ನೋಡಿ, ಪಟ್ಟಣ ಪ್ರವೇಶಿಸದೆ ಮಧ್ಯದಲ್ಲೇ ವಾಪಸ್ ಹೋಗಿ ಮನೆ ಸೇರಿದ ಘಟನೆಯು ನಡೆದಿದೆ. ಗ್ರಾಮೀಣ ಪ್ರದೇಶದ ಜನರು ತಮ್ಮ ಹಳ್ಳಿಯನ್ನು ಬಿಡದೇ ಬೇವಿನ ಮರದ ಕೆಳಗೆ ಕಾಲ ಕಳೆಯುತ್ತಿದ್ದಾರೆ.

ಒಟ್ಟಾರೆ ತಾಲ್ಲೂಕಿನಲ್ಲಿ ನಡೆದ ವೀಕೆಂಡ್ ಕರ್ಫ್ಯೂಗೆ ತಾಲ್ಲೂಕಿನ ಜನ ಸ್ಪಂದಿಸಿದ್ದಾರೆ. ಜನತೆ ಸರ್ಕಾರದ ಆದೇಶವನ್ನು ಉಲ್ಲಂಘಿಸದೇ ಕಟ್ಟುನಿಟ್ಟಾಗಿ ಪಾಲನೆ ಮಾಡಿರುವುದು ಕಂಡುಬಂದಿದೆ.

## ಐವರ್‌ಮೆಕ್ಟಿನ್ ಔಷಧ ನೀಡಲು ರೆಡ್‌ಕ್ರಾಸ್ ಸಹಾಯಕ್ಕೆ ಕರೆ



ದಾವಣಗೆರೆ, ಏ. 24 - ಕೊರೊನಾ ಸೋಂಕು ಹೆಚ್ಚುತ್ತಿರುವ ಕಾಲದಲ್ಲಿ ಸರ್ಕಾರ ಒಂದಷ್ಟು ಔಷಧಗಳನ್ನು ನೀಡುತ್ತಿದೆ. ಐವರ್‌ಮೆಕ್ಟಿನ್ ಎಂಬ ಔಷಧವನ್ನು ನೀಡುತ್ತಿಲ್ಲ. ಈ ಔಷಧಕ್ಕೆ ಒಂದಕ್ಕೆ 370 ಇರುವುದರಿಂದ ಬಡವರಿಗೆ ವೆಚ್ಚ ಭರಿಸುವುದು ಕಷ್ಟ. ಹಾಗಾಗಿ ದಾನಿಗಳು ಈ ಔಷಧವನ್ನು ಖರೀದಿಸಿ, ರೆಡ್‌ಕ್ರಾಸ್‌ಗೆ ನೀಡಿದರೆ ಅವುಗಳನ್ನು ಅಗತ್ಯ ಇರುವ ಬಡವರಿಗೆ ವಿತರಿಸಲಾಗುವುದು ಎಂದು ರೆಡ್‌ಕ್ರಾಸ್ ಅಧ್ಯಕ್ಷ ಡಾ. ಎ.ಎಂ. ಶಿವಕುಮಾರ್ ಮನವಿ ಮಾಡಿದ್ದಾರೆ.

ಈ ಔಷಧದ ವೆಚ್ಚವನ್ನು ಭರಿಸುವವರು ಇದ್ದರೆ ಇಂಡಿಯನ್ ರೆಡ್ ಕ್ರಾಸ್‌ನ ಉಳಿತಾಯ ಖಾತೆಗೆ (ಖಾತೆ ನಂಬರ್ 64026238520 IFSC ಕೋಡ್ : ಎಸ್‌ಬಿಐಎನ್ 0040947) ಕೊಡುಗೆ ನೀಡಬಹುದು. ಆಸಕ್ತರು ಮೊಬೈಲ್ 9964582203, ದೂರವಾಣಿ 08192-252550 ಸಂಪರ್ಕಿಸಬಹುದು.

## ಆಕ್ಸಿಜನ್ : ಕ್ರಯೋಜನಿಕ್ ಟ್ಯಾಂಕ್ ಆಮದು

ನವದೆಹಲಿ, ಏ. 24 – ಭಾರತೀಯ ವಾಯುಪಡೆಯು ಆಕ್ಸಿಜನ್ ಪೂರೈಕೆಗೆ ಬಳಸಲು ನಾಲ್ಕು ಕ್ರಯೋಜನಿಕ್ ಟ್ಯಾಂಕ್‌ಗಳನ್ನು ಸಿಂಗಪುರದಿಂದ ಭಾರತಕ್ಕೆ ತಂದಿದೆ.


ಕಂಟೈನರ್‌ಗಳನ್ನು ವಾಯುಪಡೆಯ ಸಿ17 ಭಾರೀ ವಿಮಾನದ ಮೂಲಕ ಸಿಂಗಪುರದಿಂದ ತರಲಾಗಿದೆ. ಇವುಗಳನ್ನು ಪಶ್ಚಿಮ ಬಂಗಾಳದ ಪನಘರ್‌ಗೆ 4.30ರ ಸಮಯದಲ್ಲಿ ತಂದಿರಿಸಲಾಗಿದೆ.

ಇದೇ ವೇಳೆ, ಹಾಂಕಾಂಗ್‌ನಿಂದ ದೆಹಲಿಗೆ 800 ಆಕ್ಸಿಜನ್ ಕಾನ್ಸಂಟ್ರೇಟರ್‌ಗಳನ್ನು ವಿಮಾನದ ಮೂಲಕ ತರಲಾಗುತ್ತಿದೆ. ಸೋಮವಾರ ಇವು ದೆಹಲಿ ತಲುಪುವ ನಿರೀಕ್ಷೆ ಇದೆ ಎಂದು ಸ್ಪೈಸ್‌ಜೆಟ್ ವಿಮಾನಯಾನ ಸಂಸ್ಥೆಯ ಸರಕು ವಿಭಾಗವಾದ ಸ್ಪೈಸ್‌ಎಕ್ಸ್‌ಪ್ರೆಸ್ ತಿಳಿಸಿದೆ.

## ಆಕ್ಸಿಜನ್ ನೆರವಿಗೆ ಬ್ರಿಟನ್‌ನಲ್ಲಿ ಮನವಿ

ಲಂಡನ್, ಏ. 24 – ಭಾರತದಲ್ಲಿ ಕೊರೊನಾ ಪರಿಸ್ಥಿತಿ ಉಲ್ಬಣಿಸಿರುವುದರಿಂದ ಆಕ್ಸಿಜನ್ ಹಾಗೂ ಔಷಧಿಗಳ ಪೂರೈಕೆಗೆ ನೆರವಾಗುವಂತೆ ಬ್ರಿಟನ್‌ನಲ್ಲಿ ಭಾರತೀಯ ಉಚ್ಚಾಯೋಗ ಬಹಿರಂಗ ಮನವಿ ಮಾಡಿಕೊಂಡಿದೆ. ಆಕ್ಸಿಜನ್ ಸಿಲಿಂಡರ್, ಕಾನ್ಸಂಟ್ರೇಟರ್ ಹಾಗೂ ರೆಮ್ಡಿಸಿವಿರ್ ಔಷಧಿಗಳ ಅಗತ್ಯವಿದೆ ಎಂದು ಉಚ್ಚಾಯೋಗ ಸಾಮಾಜಿಕ ಜಾಲತಾಣದ ಮೂಲಕ ತಿಳಿಸಿದೆ.

## ಉಕ್ಕಡಗಾತ್ರಿ : ಅಜ್ಜಯ್ಯನ ದರ್ಶನ ಸ್ಥಗಿತ



ಮಲೇಬೆನ್ನೂರು, ಏ.24- ಎಲ್ಲಾ ಕಡೆ ಕೊರೊನಾ 2ನೇ ಅಲೆ ವ್ಯಾಪಕವಾಗಿ ಹರಡುತ್ತಿರುವುದರಿಂದ ಸರ್ಕಾರದ ಸೂಚನೆಯಂತೆ ಭಕ್ತರ ಹಿತದೃಷ್ಟಿಯಿಂದ ಮುನ್ನೆಚ್ಚರಿಕೆ ಕ್ರಮವಾಗಿ ಸುಕ್ಷೇತ್ರ ಉಕ್ಕಡಗಾತ್ರಿಯಲ್ಲಿ ಪವಾಡ ಪುರುಷ ಶ್ರೀ ಗುರು ಕರಿಬಸವೇಶ್ವರ ಅಜ್ಜಯ್ಯನ ಗದ್ದುಗೆ ದರ್ಶನವನ್ನು ಶನಿವಾರದಿಂದ ತಾತ್ಕಾಲಿಕವಾಗಿ ಬಂದ್ ಮಾಡಲಾಗಿದೆ. ದೇವಸ್ಥಾನದಲ್ಲಿ ಗದ್ದುಗೆ ಪೂಜೆಗಳು ಎಂದಿನಂತೆ ನಡೆಯಲಿವೆ. ಆದರೆ, ಭಕ್ತರಿಗೆ ಪ್ರವೇಶವಿರುವುದಿಲ್ಲ ಎಂದು ತಿಳಿಸಿರುವ ಗದ್ದುಗೆ ಟ್ರಸ್ಟ್ ಕಮಿಟಿ ಕಾರ್ಯದರ್ಶಿ ಸುರೇಶ್ ಅವರು, ಹುಣ್ಣಿಮೆ ಕಾರ್ಯಕ್ರಮ ಹಾಗೂ ವಿಶೇಷ ಪೂಜೆ, ವಸತಿ ವ್ಯವಸ್ಥೆಯನ್ನು ಮುಂದಿನ ಆದೇಶದವರೆಗೂ ನಿಷೇಧಿಸಲಾಗಿದೆ.

**ನಿಷೇಧ** : ಕೊರೊನಾ ಹಿನ್ನೆಲೆಯಲ್ಲಿ ಹರಿಹರ ತಾಲ್ಲೂಕಿನಲ್ಲಿರುವ ವಿವಿಧ ಮಠಗಳು ಸೇರಿದಂತೆ ಕೊಕ್ಕನೂರು ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನ ಮತ್ತು ಇನ್ನಿತರೆ ದೇವಸ್ಥಾನಗಳಲ್ಲಿ ಭಕ್ತರ ಪ್ರವೇಶವನ್ನು ನಿಷೇಧಿಸಲಾಗಿದೆ.

## ನಗರದಲ್ಲಿ ಇಂದಿನಿಂದ ರೋಗಿಗಳಿಗೆ, ನಿರ್ಗತಿಕರಿಗೆ ಅನ್ನ ದಾಸೋಹ

ದಾವಣಗೆರೆ,ಏ.24-ಕೊರೊನಾ ವೈರಸ್ ಹಿನ್ನೆಲೆಯಲ್ಲಿ ಸಂಕಷ್ಟಕ್ಕೀಡಾಗಿರುವ ರೋಗಿಗಳಿಗೆ, ನಿರ್ಗತಿಕರಿಗೆ, ಬಡವರಿಗೆ ನಾಳೆ ದಿನಾಂಕ 25 ರ ಭಾನುವಾರದಿಂದ ಅನ್ನ ದಾಸೋಹ ನಡೆಯಲಿದೆ.

ನಗರದ ಸಾಮಾಜಿಕ ಸೇವಾ ಸಂಸ್ಥೆಗಳಾದ ವಿಕಾಸ ತರಂಗಿಣಿ ಮತ್ತು ಸ್ಫೂರ್ತಿ ಸೇವಾ ಸಂಸ್ಥೆ ಇವರ ಜಂಟಿ ಆಶ್ರಯದಲ್ಲಿ ದಾನಿಗಳ ನೆರವಿನಿಂದ ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಸಂಸ್ಥೆಯ ಸಂಚಾಲಕ ಬಿ. ಸತ್ಯನಾರಾಯಣ ರೆಡ್ಡಿ ತಿಳಿಸಿದ್ದಾರೆ.

ಜಿಲ್ಲಾ ಚಿಗಟೇರಿ ಸಾರ್ವಜನಿಕ ಸರ್ಕಾರಿ ಆಸ್ಪತ್ರೆ ಮತ್ತು ಹಳೇಪೇಟೆಯಲ್ಲಿರುವ ಸರ್ಕಾರಿ ಹಳೇ ಆಸ್ಪತ್ರೆಗಳಲ್ಲಿ ಅನ್ನ ದಾಸೋಹ ಕಾರ್ಯಕ್ರಮ ನಡೆಸಲಾಗುವುದು ಎಂದು ಅವರು ವಿವರಿಸಿದ್ದಾರೆ.

# ಕೋವಿಡ್ ಶವ ಸಾಗಾಟಕ್ಕೆ ದುಬಾರಿ ಹಣ ವಸೂಲಿ

**ಜಿಲ್ಲಾ ಪಂಚಾಯತ್ ಸದಸ್ಯ ಬಸವಂತಪ್ಪ ಆರೋಪ**



ದಾವಣಗೆರೆ, ಏ.24- ಕೋವಿಡ್ ನಿಂದಾಗಿ ಮರಣ ಹೊಂದಿದವರ ಶವ ಸಾಗಿಸಲು ಹಾಗೂ ಹೂಳಲು ದುಬಾರಿ ಹಣ ವಿಧಿಸಲಾಗುತ್ತಿದ್ದು, ಜಿಲ್ಲಾಡಳಿತ ಈ ಬಗ್ಗೆ ಗಮನಹರಿಸಬೇಕೆಂದು ಜಿಲ್ಲಾ ಪಂಚಾಯತ್ ಸದಸ್ಯ ಕೆ.ಎಸ್. ಬಸವಂತಪ್ಪ ಒತ್ತಾಯಿಸಿದ್ದಾರೆ.

ಇತ್ತೀಚೆಗಷ್ಟೇ ಕೊರೊನಾದಿಂದಾಗಿ ಆನಗೋಡು ಗ್ರಾಮದ ವ್ಯಕ್ತಿಯೊಬ್ಬರು ಮೃತಪಟ್ಟಿದ್ದರು. ಅವರ ಶವ ಸಾಗಿಸಲು ಆಂಬ್ಯುಲೆನ್ಸ್ ನವರು ಸುಮಾರು 13 ಸಾವಿರ ಹಣ ಪಡೆದಿದ್ದಾರೆ. ಬಡವರು, ಕೂಲಿ ಕಾರ್ಮಿಕರು ಈ ವೆಚ್ಚ ಭರಿಸಲು ಸಾಧ್ಯವಿಲ್ಲ. ಶವ ಸಂಸ್ಕಾರಕ್ಕೂ ದುಬಾರಿ ವೆಚ್ಚ ತಗುಲುತ್ತಿದೆ ಎಂದು ಪತ್ರಿಕಾಗೋಷ್ಠಿಯಲ್ಲಿ ಆರೋಪಿಸಿದರು.

ಕೋವಿಡ್ ನಿಂದಾಗಿ ಸಾವನ್ನಪ್ಪುತ್ತಿರುವವರ ಸಂಖ್ಯೆ ದಿನದಿಂದ ದಿನಕ್ಕೆ ಏರಿಕೆಯಾಗುತ್ತಿದೆ. ಆದ್ದರಿಂದ ಜಿಲ್ಲಾಡಳಿತ ಖಾಸಗಿ ಆಂಬ್ಯುಲೆನ್ಸ್‌ಗಳನ್ನು ಬಾಡಿಗೆಗೆ ಪಡೆದು ಬಡವರಿಗೆ ಹಾಗೂ ಕೂಲಿ ಕಾರ್ಮಿಕರಿಗೆ ಉಚಿತ ಸೇವೆ ಒದಗಿಸಬೇಕು. ಕೋವಿಡ್‌ನಿಂದಾಗಿ ದುಡಿಮೆ ಇಲ್ಲವಾಗಿದೆ. ಇದರಿಂದ ಜನರು ಆರ್ಥಿಕ ಕಷ್ಟದಲ್ಲಿದ್ದಾರೆ. ಇಂತಹ ಸಮಯದಲ್ಲಿ ಖಾಸಗಿ ಆಸ್ಪತ್ರೆಗಳಲ್ಲಿಯೂ ಕೋವಿಡ್ ಚಿಕಿತ್ಸೆ ಪಡೆದವರಿಗೆ ಸರ್ಕಾರ ಶೇ. 50ರಷ್ಟು ವೆಚ್ಚ ಭರಿಸಬೇಕು. ಜನರ ತೆರಿಗೆ ಹಣ ಜನರಿಗೆ ಸಲ್ಲುವಂತೆ ಮಾಡಿದರೆ ಅವರ ಆರ್ಥಿಕ ಹೊರೆ ತಪ್ಪಿಸಿದಂತಾಗುತ್ತದೆ. ಅದಕ್ಕಾಗಿ ಬಿಪಿಎಲ್ ಕಾರ್ಡ್ ಹೊಂದಿರುವವರಿಗೆ ಖಾಸಗಿ ಆಸ್ಪತ್ರೆಗಳಲ್ಲಿ ರಿಯಾಯಿತಿ ನೀಡಬೇಕು. ಕೋವಿಡ್ ನಿಂದ ಮರಣ ಹೊಂದಿದವರಿಗೆ ರುದ್ರಭೂಮಿಯಲ್ಲಿ ಶವ ಸಂಸ್ಕಾರಕ್ಕೆ ಕೆಲವೆಡೆ ಅವಕಾಶ ನೀಡುತ್ತಿಲ್ಲ. ಈ ಬಗ್ಗೆ ಜಿಲ್ಲಾಧಿಕಾರಿಗಳು ಗಮನಹರಿಸಬೇಕು ಎಂದು ಆಗ್ರಹಿಸಿದರು.

ಜಿಲ್ಲಾಸ್ಪತ್ರೆಯಲ್ಲಿ ಕೋವಿಡ್ ಲಸಿಕೆ ಹಾಕಿಸಿಕೊಳ್ಳಲು ಸರತಿ ಸಾಲು ನಿರ್ಮಾಣವಾಗಿದೆ. ಆದರೆ, ಕಳೆದ ಕೆಲ ದಿನಗಳಿಂದ ಲಸಿಕೆ ಕೊರತೆ ಕಂಡು ಬರುತ್ತಿದೆ. ನಿತ್ಯ ನೂರಾರು ಜನರು ಲಸಿಕೆ ಹಾಕಿಸಿಕೊಳ್ಳಲು ಸರತಿ ಸಾಲಿನಲ್ಲಿ ನಿಲ್ಲುತ್ತಿದ್ದಾರೆ. ಕೇವಲ 300 ಲಸಿಕೆಗಳಷ್ಟೇ ಬರುತ್ತಿವೆ. ಇದರಿಂದ ಅಭಾವ ಉಂಟಾಗುತ್ತಿದೆ. ಜಿಲ್ಲಾಡಳಿತ ಈ ಕೂಡಲೇ ಅವಶ್ಯಕ ಲಸಿಕೆಗಳನ್ನು ಒದಗಿಸಲು ಕ್ರಮ ವಹಿಸಬೇಕೆಂದು ಮನವಿ ಮಾಡಿದರು.



**ದಾವಣಗೆರೆ, ಏ.24- ಚಿಗಟೇರಿ ಆಸ್ಪತ್ರೆಯಲ್ಲಿ ಜಗದ್ಗುರು ಶ್ರೀ ವಚನಾನಂದ ಸ್ವಾಮೀಜಿ ಅವರು ಕೋವಿಶಿಲ್ಡ್ ವ್ಯಾಕ್ಸಿನ್ ಪಡೆದುಕೊಂಡರು.**

## ವಿಶಿಷ್ಟವಾಗಿ ಜನ್ಮದಿನ ಆಚರಿಸಿಕೊಂಡ ವಚನಾನಂದ ಶ್ರೀ



ಮಲೇಬೆನ್ನೂರು, ಏ. 24- ನಮ್ಮ ಜನ್ಮದಿನದ ಕೊಡುಗೆಯಾಗಿ ಭಕ್ತರು ಕೋವಿಡ್ ಲಸಿಕೆ ಹಾಕಿಸಿಕೊಳ್ಳುವಂತೆ ಪ್ರೋತ್ಸಾಹಿಸಿ, ಸಾಧ್ಯವಾದಷ್ಟು ಹೆಚ್ಚು ಹೆಚ್ಚು ಮಾಸ್ಕ್ ವಿತರಿಸಿ, ದೈಹಿಕ ಅಂತರ ಮರೆಯಬೇಡಿ. ಮಾಸ್ಕ್ ಧರಿಸದೇ ಹೊರಗಡೆ ಬರಬೇಡಿ ಎಂದು ಪಂಚಮಸಾಲಿ ಪೀಠದ ಶ್ರೀ ವಚನಾನಂದ ಸ್ವಾಮೀಜಿ ಸಂದೇಶ ನೀಡಿದ್ದಾರೆ.

ಶನಿವಾರ ತಮ್ಮ ಹುಟ್ಟುಹಬ್ಬದ ಅಂಗವಾಗಿ ಭಕ್ತರಿಗೆ ನಮ್ಮ ಜನ್ಮ ದಿನಕ್ಕೆ ನಿಮ್ಮ ಆರೋಗ್ಯವನ್ನು ಉಡುಗೊರೆಯಾಗಿ ನೀಡಿ ಎಂಬ ಶೀರ್ಷಿಕೆಯಲ್ಲಿ ಸಂದೇಶ ನೀಡಿ ವಿಶಿಷ್ಟವಾಗಿ ತಮ್ಮ ಜನ್ಮ ದಿನ ಆಚರಿಸಿಕೊಂಡರು.

**ನಿಷೇಧ** : ಈ ನಡುವೆ ಕೊರೊನಾ 2ನೇ ಅಲೆ ಹೆಚ್ಚಾಗುತ್ತಿರುವುದರಿಂದ ಸರ್ಕಾರದ ಮಾರ್ಗಸೂಚಿಯಂತೆ ಪಂಚಮಸಾಲಿ ಪೀಠಕ್ಕೆ ಸಾರ್ವಜನಿಕರ ನಿಷೇಧ ಎಂಬ ಫಲಕವನ್ನು ಮಠದ ಗೇಟಿಗೆ ಹಾಕಲಾಗಿದೆ.

## ಡಾ. ರೇಣುಕಾ ಬಾತಿ ನಿಧನ



ಹಳೇಬಾತಿ ಗಿರಿಯಪ್ಪ ಗೌಡರ ಪುತ್ರ
ಡಾ. ಜಗದೀಶ್ ಬಾತಿಯವರ ಪತ್ನಿ

**ಡಾ. ರೇಣುಕಾ ಬಾತಿ**

ಅವರು ದಿ.: 23.04.2021ರ ಶುಕ್ರವಾರ ಬೆಳಿಗ್ಗೆ 11.00 ಗಂಟೆಗೆ ಉತ್ತರ ಪ್ರದೇಶದ ನೊಯ್ಡಾದಲ್ಲಿ ನಿಧನರಾದರು. ಪತಿ, ಓರ್ವ ಪುತ್ರ, ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ಆ ದಿನವೇ ಸಂಜೆ ನೊಯ್ಡಾದಲ್ಲಿ ನೆರವೇರಿಸಲಾಯಿತು.

**ದುಃಖತಪ್ತ ಕುಟುಂಬ ವರ್ಗ :**

ಹಳೇಬಾತಿ ಗಿರಿಯಪ್ಪ ಗೌಡರ ಮಕ್ಕಳು, ಮೊಮ್ಮಕ್ಕಳು, ಅಳಿಯಂದಿರು ಮತ್ತು ಗೌಡ್ರ ವಂಶಸ್ಥರು, ಹಳೇಬಾತಿ. ಹೊಸಳ್ಳಿ ಶ್ರೀಮತಿ ಲಕ್ಷ್ಮಮ್ಮ ಪಳಗಿ ರಾಮಚಂದ್ರಪ್ಪ ಮತ್ತು ಮಕ್ಕಳು, ಮೊಮ್ಮಕ್ಕಳು, ಡಿ.ಬಿ. ಹಳ್ಳಿ.

JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte